ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಬುಧವಾರ, ಅಕ್ಟೋಬರ್ 04, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 142 RNI : 27369/75

janathavani@mac.com
www.janathavani.com
08192 254736 91642 99999

## ಅಧಿಕಾರಿಗಳಿಗೆ ಅನ್ಯಾಯ ಎಸ್ಸೆಸ್ ಹೇಳಿಕೆಗೆ ಬೆಂಬಲ




ದಾವಣಗೆರೆ, ಅ. 3- ಲಿಂಗಾಯತ ಅಧಿಕಾರಿಗಳಿಗೆ ಹುದ್ದೆ ನೀಡುವಲ್ಲಿ ಸಮಸ್ಯೆಯಾಗಿರುವ ಬಗ್ಗೆ ತಮ್ಮ ಬಳಿಯೂ ಕೆಲವರು ತಿಳಿಸಿದ್ದಾರೆ ಎಂದು ಕೂಡಲ ಸಂಗ ಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮಿ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸರ್ಕಾರದ ಆಡಳಿತ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅಧಿಕಾರಿಗಳ ಪ್ರಾಮಾಣಿಕತೆ ಹಾಗೂ ದಕ್ಷತೆ ಆಧಾರದ ಮೇಲೆ ಆಯಕಟ್ಟಿನ ಜಾಗದಲ್ಲಿ ಕೂರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಸೂಕ್ತ ಹುದ್ದೆಗಳು ದೊರೆತಿಲ್ಲ ಎಂದು ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದ್ದರು. ಈ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಸ್ವಾಮೀಜಿ ಉತ್ತರಿಸಿದರು. ಸರ್ಕಾರಗಳು ಬದಲಾದಂತೆ ಜನಾಂಗದ (4ನೇ ಪುಟಕ್ಕೆ)

## ಕೋಮು ಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ : ಸಿಎಂ

ಬೆಂಗಳೂರು, ಅ. 3 - ನಮ್ಮ ಸರ್ಕಾರ ಕೋಮು ಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಸಮಾಜದಲ್ಲಿ ಕೋಮು ಸೌಹಾರ್ದತೆಗೆ ಭಂಗ ತರುವ ಪ್ರಕರಣಗಳನ್ನು ನಿಯಂತ್ರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೇಲೆ ಕೋಮು ಗಲಭೆ ಹೆಚ್ಚಾಗಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿರುವುದಕ್ಕೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರಿಗೆ ಆರೋಪ ಮಾಡುವುದೇ ಕೆಲಸವಾಗಿದೆ ಎಂದರು.

ಆರೋಪ ಮಾಡುವುದೆಲ್ಲ ಸತ್ಯವಲ್ಲ. ಶಿವಮೊಗ್ಗದ ಪ್ರಕರಣದಲ್ಲಿ ಕಲ್ಲು ಹೊಡೆದ ದುಷ್ಕರ್ಮಿಗಳನ್ನು ಬಂಧಿಸಲಾಗಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕೋಲಾರದಲ್ಲಿ ಬಿಜೆಪಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಉತ್ತರಿಸಿ, ಯಾರು ಬೇಕಾದರೂ ಪ್ರತಿಭಟನೆ (4ನೇ ಪುಟಕ್ಕೆ)

# ‘ಲಿಂಗಾಯತ’ ಕಾರಣಕ್ಕೆ ಮೀಸಲಾತಿ ಸಿಗುತ್ತಿಲ್ಲ

## ಯಾಕಾದರೂ ಲಿಂಗಾಯತರಾದೆವೋ ಎನ್ನುವ ಸ್ಥಿತಿ ನಿರ್ಮಾಣ: ಜಯ ಮೃತ್ಯುಂಜಯ ಶ್ರೀ

ದಾವಣಗೆರೆ, ಸೆ. 3 - ಜಾತಿ ಪ್ರಮಾಣ ಪತ್ರದಲ್ಲಿ ‘ಲಿಂಗಾಯತ’ ಎಂದು ನಮೂದಿಸಿದ ಕಾರಣಕ್ಕಾಗಿ ಮಕ್ಕಳು ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ಮಕ್ಕಳು ನಾವು ಯಾಕಾದರೋ ಲಿಂಗಾಯತರಾದೆವೋ ಎಂದು ಬೈದುಕೊಳ್ಳುವ ಪರಿಸ್ಥಿತಿ ಇದೆ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ವಿಷಾದಿಸಿದ್ದಾರೆ.

ನಗರದ ಶಿವಯೋಗಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿವಶರಣ, ನಿಜಸುಖಿ ಹಡಪದ ಅಪ್ಪಣ್ಣ ಶರಣರ 889ನೇ ಜಯಂತ್ಯೋತ್ಸವ ಹಾಗೂ ಜನಜಾಗೃತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹಡಪದ ಸಮುದಾಯ ಒಂದೇ ಆಗಿದೆ. ಆದರೆ, ಹಿಂದೂ ಹಡಪದ ಎಂದು ಜಾತಿ ಪ್ರಮಾಣ ಪತ್ರದಲ್ಲಿದ್ದರೆ 2ಎ, ಲಿಂಗಾಯತ ಹಡಪದ ಎಂದಿದ್ದರೆ 3ಬಿಗೆ ಸೇರಿಸಲಾಗುತ್ತಿದೆ ಎಂದವರು ಹೇಳಿದರು.

ಹಿಂದೂ ಹಡಪದ ಹಾಗೂ ಲಿಂಗಾಯತ ಹಡಪದ ಒಂದೇ ಸಮುದಾಯದ ಪರ್ಯಾಯ ನಾಮಗಳು. ಕುರುಬ, ಕುಂಬಾರ, ಕಮ್ಮಾರ ಹೀಗೆ ಎಲ್ಲ ಲಿಂಗಾಯತರ ಉಪಪಂಗಡಗಳು ಮೀಸಲಾತಿಯಿಂದ ವಂಚಿತವಾಗಿವೆ. ಸಾಕಷ್ಟು ಪಂಗಡಗಳು ಮೀಸಲಾತಿ ಕಾರಣಕ್ಕಾಗಿಯೇ ಲಿಂಗಾಯತ ಹೆಸರಿನ ಬಳಕೆ ಬಿಟ್ಟಿವೆ ಎಂದು ಶ್ರೀಗಳು ತಿಳಿಸಿದರು.

ಈ ಹಿಂದೆ ಮೀಸಲಾತಿ ನಿಗದಿ ಪಡಿಸುವ ಸಂದರ್ಭದಲ್ಲಿ ಲಿಂಗಾಯತ ಸಮುದಾಯಗಳನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಈ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದವರು ಆಗ್ರಹಿಸಿದರು. (4ನೇ ಪುಟಕ್ಕೆ)

### ಕಾಯಕ ಸಮಾಜಕ್ಕೆ ಮೀಸಲಾತಿ, ಕಾಲಿಗೆ ಬೀಳಿಸಿಕೊಳ್ಳುವವರಿಗೆ ಅಲ್ಲ

ಕೆಲ ಕಾಯಕ ಸಮುದಾಯದವರ ಮುಖ ನೋಡಬಾರದು ಎಂಬ ಅನಿಷ್ಟ ಪದ್ಧತಿ ಸಮಾಜದಲ್ಲಿತ್ತು. ಇಂತಹ ಕಾಯಕ ಸಮುದಾಯದವರಿಗೆ ಮೀಸಲಾತಿ ಸಿಗಬೇಕೇ ಹೊರತು, ಗುರುವಿನ ಸ್ಥಾನದಲ್ಲಿದ್ದು ಕಾಲಿಗೆ ಬೀಳಿಸಿಕೊಳ್ಳುವವರಿಗೆ ಅಲ್ಲ ಎಂದು ಶಾಸಕ ಬಸವಂತಪ್ಪ ಹೇಳಿದರು. ಗುರುವಿನ ಸ್ಥಾನದಲ್ಲಿ ರುವ ಕೆಲವರು ಬೋಗಸ್ ಪ್ರಮಾಣ ಪತ್ರದಿಂದ ಮೀಸಲಾತಿ ಪಡೆಯುತ್ತಿದ್ದಾರೆ. ಈ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ ಎಂದರು.



### ಹಡಪದ ಶ್ರೀಗಳಿಂದ ‘ಬೆಂಕಿ’ ಮಾತು

ಹಡಪದ ಅಪ್ಪಣ್ಣ ಸಮಾಜಕ್ಕೆ 2ಎ ಮೀಸಲಾತಿ ನೀಡದೇ ಇದ್ದರೆ ಉಗ್ರವಾದ ಹೋರಾಟ ನಡೆಸಬೇಕಾಗುತ್ತದೆ. ಬಸ್ಸಿಗೆ ಕಲ್ಲು ಹೊಡೆಯುವ, ಬೆಂಕಿ ಹಚ್ಚುವ ಕಾಲ ಬರುತ್ತದೆ ಎಂದು ತಂಗಡಗಿಯ ಶ್ರೀ ಅನ್ನದಾನಿ ಭಾರತಿ ಬಸವಪ್ರಿಯ ಹಡಪದ ಅಪ್ಪಣ್ಣ ಸ್ವಾಮೀಜಿ ಎಚ್ಚರಿಸಿದರು. ಲಿಂಗಾಯತ ಎಂಬ ಕಾರಣಕ್ಕಾಗಿ 2ಎ ಮೀಸಲಾತಿ ಸಿಗುವುದಿಲ್ಲ ಎಂದಾದರೆ, ನಾವು ಬೌದ್ಧ ಧರ್ಮಕ್ಕೆ ಮತಾಂತರವಾಗುತ್ತೇವೆ ಎಂದು ಈ ಹಿಂದೆಯೇ ಹೇಳಿದ್ದನ್ನು ಸ್ವಾಮೀಜಿ ನೆನಪಿಸಿದರು. ಶ್ರೀಗಳ ಮಾತಿಗೆ ಅಸಮಾಧಾನ ವ್ಯಕ್ತಪಡಿಸಿದ ಮುರುಘಾಮಠದ ಉಸ್ತುವಾರಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿ, ಶಾಂತಿಯುತವಾಗಿ ಪ್ರತಿಭಟನೆಗಳನ್ನು ನಡೆಸಬೇಕು. ಇನ್ನೊಂದು ಧರ್ಮಕ್ಕೆ ಹೋಗುತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ. ನಾವು ಸದಾ ನಿಮ್ಮೊಂದಿಗೆ ಇರುತ್ತೇವೆ ಎಂದು ಭರವಸೆ ನೀಡಿದರು.

### ಗ್ಯಾರಂಟಿ ಬಿಟ್ಟರೂ ಸರಿ ಬಾರ್ ಬೇಡ : ತೇಜಸ್ವಿ

ಮೀಸಲಾತಿಯಿಂದ ಕೆಲ ಕುಟುಂಬಗಳು ಮಾತ್ರ ಉದ್ಧಾರವಾಗುತ್ತವೆ. ಪ್ರತಿ ವೃತ್ತಿಗೆ ಆರ್ಥಿಕ ಶಕ್ತಿ ಕೊಟ್ಟರೆ ಸಂಪೂರ್ಣ ಅಭಿವೃದ್ಧಿ ಸಾಧ್ಯ ಎಂದು ರೈತ ಮುಖಂಡ ತೇಜಸ್ವಿ ಪಟೇಲ್ ಅಭಿಪ್ರಾಯ ಪಟ್ಟರು. ಸರ್ಕಾರ ಹೊಸ ಬಾರ್‌ಗಳನ್ನು ತೆರೆಯಲು ಮುಂದಾಗಿರುವುದಕ್ಕೆ ಆಕ್ಷೇಪಿಸಿದ ಅವರು, ಒಂದೆರಡು ಗ್ಯಾರಂಟಿಗಳನ್ನು ಕೈ ಬಿಟ್ಟರೂ ಪರವಾಗಿಲ್ಲ. ಬಾರ್‌ಗಳನ್ನು ತೆರೆಯಬಾರದು ಎಂದರು.

## ಲಿಂಗಾಯತ ಸಮುದಾಯಕ್ಕೆ ಅನ್ಯಾಯವಾಗಿಲ್ಲ

### ಸಿಎಂ ಸಿದ್ದರಾಮಯ್ಯ ಸಮರ್ಥಿಸಿಕೊಂಡ ಶಾಸಕ ಬಸವರಾಜ ರಾಯರೆಡ್ಡಿ

ಬೆಂಗಳೂರು, ಅ.3- ಲಿಂಗಾಯತ ಸಮುದಾಯಕ್ಕೆ ಸೇರಿದ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನಿಯೋಜಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಆಡಳಿತ ಪಕ್ಷದ ಶಾಸಕರು ವಕಾಲತ್ತು ವಹಿಸಿದ್ದಾರೆ.

ಪಕ್ಷದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಬಸವ ತತ್ವದ ಮೇಲೆ ನಡೆಯುತ್ತಿದೆಯೇ ಹೊರತು, ಜಾತಿ ತತ್ವದ ಮೇಲಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಮುಖ್ಯಮಂತ್ರಿಯವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಹಾಲಿ ಶಾಸಕ ಮತ್ತು ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಅವರು ತಮ್ಮ ಸಮಾಜದ ಅಧಿಕಾರಿಗಳ ನಿಯೋಜನೆಯ ಅಂಕಿ-ಅಂಶಗಳನ್ನು ಸುದ್ದಿಗೋಷ್ಠಿಯಲ್ಲಿ ಮುಂದಿಟ್ಟು, ನಮ್ಮ ಸರ್ಕಾರದಲ್ಲಿ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಿಲ್ಲ ಎಂದರು.



**ಜಾತಿ ಆಧಾರದ ಮೇಲೆ ಮಾತನಾಡುವುದು ಸರಿಯಲ್ಲ. ಶಾಮನೂರು ಶಿವಶಂಕರಪ್ಪ ಮಾತನಾಡಿರುವುದು ನೂರಕ್ಕೆ ನೂರಷ್ಟು ತಪ್ಪು. ಅದರಲ್ಲೂ ಅವರು ಶಾಸಕರಾಗಿ ಈ ರೀತಿ ಹೇಳಿಕೆ ನೀಡಬಾರದು.**

ಲಿಂಗಾಯತ ಸಮುದಾಯದ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನಿಯೋಜಿಸಿರುವ ಬಗ್ಗೆ ಮಾಹಿತಿ ನೀಡುವುದಾಗಿ ಸಿದ್ದರಾಮಯ್ಯ ಅವರು ತಿಳಿಸಿದ್ದರು. ಆದರೆ, ಇಂದು ಅವರ ಆಪ್ತ ಶಾಸಕ ಸರ್ಕಾರದ ಕೆಲವು ಅಂಕಿ-ಅಂಶಗಳನ್ನು ಮುಂದಿಟ್ಟರು.

ನಿತೀಶ್ ಪಾಟೀಲ್, ದಿವಾಕರ್, ಗೋವಿಂದ ರೆಡ್ಡಿ ಅವರು ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದು, ಜಿಲ್ಲಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಶಾಮನೂರು ಅವರಿಗೆ ಮಾಹಿತಿ ಕೊರತೆ ಇದ್ದಂತೆ ಇದೆ. ದಾವಣಗೆರೆಯಲ್ಲೇ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸುರೇಶ್ ಇಟ್ನಾಳ್, ಪೊಲೀಸ್ ವರಿಷ್ಠಾಧಿಕಾರಿಯಾಗಿ ಉಮಾ (3ನೇ ಪುಟಕ್ಕೆ)

## ಜಾತಿ ಗಣತಿ ವರದಿ ಸಲ್ಲಿಕೆಗೆ ಸಿಎಂ ಸೂಚನೆ



ಬೆಂಗಳೂರು, ಅ. 3 - ಜಾತಿ ಗಣತಿ ವರದಿ ಸರ್ಕಾರಕ್ಕೆ ಸಲ್ಲಿಸಲು ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯೋಗವು ವರದಿ ಸಲ್ಲಿಸಿದರೆ ಪರಿಶೀಲಿಸಲಾಗುವುದು. ಹೆಚ್.ಡಿ ಕುಮಾರಸ್ವಾಮಿ ಅವರು ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದಾಗ ಕಾಂತರಾಜು ಅವರು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದರು ಎಂದಿದ್ದಾರೆ. ಆಗ ಆಯೋಗ ವರದಿ ತಯಾರು ಮಾಡಿತ್ತು. ವರದಿ ಸಲ್ಲಿಸಲು ಕಾಂತರಾಜು ಹೋದಾಗ ಅದನ್ನು ಅವರು ಸ್ವೀಕರಿಸಲಿಲ್ಲ. ಆಗಿನ ಕಾರ್ಯದರ್ಶಿಗಳು ವರದಿಗೆ ಸಹಿ ಮಾಡಿಲ್ಲ. ಈಗಿನ ಕಾರ್ಯದರ್ಶಿಗಳ ಬಳಿ ಸಹಿ ಮಾಡಿಸಿ ಅವರು ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಜಾತಿ ಗಣತಿ ಹಾಗೂ ಸಾಮಾಜಿಕ, ಆರ್ಥಿಕ ಸಮೀಕ್ಷೆ ಮಾಡಬೇಕೆಂದು ನಾನೇ ಹಿಂದೆ ಆದೇಶ ಮಾಡಿದ್ದು. ಆಗ ಕಾಂತರಾಜು ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದರು. ನಮ್ಮ ಸರ್ಕಾರದ ಅವಧಿಯಲ್ಲಿ ವರದಿ (4ನೇ ಪುಟಕ್ಕೆ)

## ಎಲೆಕ್ಟ್ರಾನ್ : ಮೂವರಿಗೆ ‘ನೊಬೆಲ್’

ಸ್ಟಾಕ್‌ಹೋಮ್, ಅ. 3 – ಅಣುಗಳಲ್ಲಿರುವ ಎಲೆಕ್ಟ್ರಾನ್‌ಗಳ ಬಗ್ಗೆ ಸಂಶೋಧನೆ ಮಾಡಿದ ಮೂವರು ವಿಜ್ಞಾನಿಗಳಿಗೆ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಪ್ರಕಟಿಸಲಾಗಿದೆ. ಅಮೆರಿಕದ ಒಹಿಯೋ ಸ್ಟೇಟ್ ವಿಶ್ವವಿದ್ಯಾಲಯದ ಪೀರೆ ಆಗೊಸ್ಟಿನಿ, ಜರ್ಮನಿಯ ಮ್ಯುನಿಚ್ ವಿಶ್ವವಿದ್ಯಾಲಯದ ಫೆರೆಂಕ್ ಕ್ರಾಸ್ ಹಾಗೂ ಸ್ವೀಡನ್‌ನ ಲುಂಡ್ ವಿಶ್ವವಿದ್ಯಾಲಯದ ಆನಿ ಹ್ಯೂಲಿಯರ್ ಅವರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರ ಸಂಶೋಧನೆಯಿಂದಾಗಿ ಅಣುಗಳಲ್ಲಿರುವ ಎಲೆಕ್ಟ್ರಾನ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಸಾಧ್ಯವಾಗಿದೆ ಎಂದು ನೊಬೆಲ್ ಪ್ರಶಸ್ತಿಯ ಆಯ್ಕೆ ಸಮಿತಿ ತಿಳಿಸಿದೆ.

## ಎಸ್.ಎಂ. ಷಡಾಕ್ಷರಯ್ಯ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್,
ಡೋರ್ ನಂ. 3364/ A14ರ ವಾಸಿ,

**ಎಸ್.ಎಂ. ಷಡಾಕ್ಷರಯ್ಯ**

ಅವರು, ದಿನಾಂಕ 03.10.2023ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.


ದಿ|| ಎಸ್.ಎಂ. ಷಡಾಕ್ಷರಯ್ಯ ಅವರ ಪಾರ್ಥಿವ ಶರೀರವನ್ನು ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್, ಡೋರ್ ನಂ. 3364/ A14ರ ಮೃತರ ನಿವಾಸದಲ್ಲಿ ದಿನಾಂಕ 05.10.2023ರ ಗುರುವಾರ ಬೆಳಿಗ್ಗೆ 10 ರಿಂದ 12 ಗಂಟೆಯವರೆಗೆ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು.

ನಂತರ ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನರಗನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಧರ್ಮಪತ್ನಿ, ಪುತ್ರಿ, ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಶಾಂತವೀರಪ್ಪ ಮಠದ ವಂಶಸ್ಥರು, ಹಾಗೂ ಬಂಧು-ಮಿತ್ರರು, ನರಗನಹಳ್ಳಿ.
ಮೊ. : 81057 16898

## ಜಾಮೀನಿಗೆ ಗೂಗಲ್ ಮ್ಯಾಪ್ ವಿವರದ ಷರತ್ತು

### ಖಾಸಗಿತನದ ಉಲ್ಲಂಘನೆಯೇ ಎಂಬ ಬಗ್ಗೆ ಸುಪ್ರೀಂ ವಿಚಾರಣೆ



ನವದೆಹಲಿ, ಅ. 3 – ಆರೋಪಿ ತಾನಿರುವ ಸ್ಥಳದ ವಿವರವನ್ನು ಗೂಗಲ್ ಮ್ಯಾಪ್ ಮೂಲಕ ತಿಳಿಸಬೇಕು ಎಂದು ಜಾಮೀನು ನೀಡುವಾಗ ಹೈಕೋರ್ಟ್ ವಿಧಿಸಿದ ಷರತ್ತಿನ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಲಿದೆ.

ದೆಹಲಿ ಹೈಕೋರ್ಟ್ ವಿಧಿಸಿರುವ ಷರತ್ತು ಆರೋಪಿಯ ಖಾಸಗಿತನದ ಉಲ್ಲಂಘನೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಬಗ್ಗೆ ಪರಿಶೀಲಿಸುವುದಾಗಿ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಪಂಕಜ್ ಮಿಥಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಜಾಮೀನು ನೀಡಿದ ನಂತರ ಆರೋಪಿಯ ಚಲನವಲನದ ಮೇಲೆ ನಿಗಾ ವಹಿಸಲಾಗಿದೆ. ಇದು ಖಾಸಗಿತನದ ಉಲ್ಲಂಘನೆಯಲ್ಲವೇ? ಎಂದು ನ್ಯಾಯಾಲಯ ಪ್ರಶ್ನಿಸಿದೆ.

3,269 ಕೋಟಿ ರೂ.ಗಳ ವಂಚನೆ ಹಗರಣದಲ್ಲಿ ಸಿಲುಕಿದ್ದ ಆರೋಪಿ ರಮಣ್ ಭುರಿಯಾ ಎಂಬ ವ್ಯಕ್ತಿಗೆ ದೆಹಲಿ ಹೈಕೋರ್ಟ್ ಫೆಬ್ರವರಿ (3ನೇ ಪುಟಕ್ಕೆ)

## ಹಕ್ಕುಗಳೆಲ್ಲಾ ಹಿಂದೂಗಳಿಗೇ ಸಿಗಬೇಕೇ?: ಮೋದಿ

### ಕಾಂಗ್ರೆಸ್‌ನ ಜನಸಂಖ್ಯೆ ಆಧಾರದ ಮೇಲೆ ಹಕ್ಕು ವಾದಕ್ಕೆ ಪ್ರಶ್ನೆ



ಜಗದಾಳ್ಪುರ, ಅ. 3 – ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಹಕ್ಕುಗಳನ್ನು ನೀಡಬೇಕು ಎಂಬ ಬೇಡಿಕೆಯ ಬಗ್ಗೆ ಕಾಂಗ್ರೆಸ್ ಸ್ಪಷ್ಟನೆ ನೀಡಬೇಕು. ಕಾಂಗ್ರೆಸ್ ಪಕ್ಷವೇನು ಮುಸ್ಲಿಮರ ಹಕ್ಕುಗಳನ್ನು ಇಳಿಸಲು ಬಯಸಿದೆಯೇ? ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ.

ದೇಶದಲ್ಲಿ ಜಾತಿ ಗಣತಿ ನಡೆಸಬೇಕು. ಜನಸಂಖ್ಯೆಗೆ ಪ್ರಮಾಣಕ್ಕನುಗುಣವಾಗಿ ಹಕ್ಕುಗಳನ್ನು ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದ್ದರು.

ಈ ಬಗ್ಗೆ ಛತ್ತೀಸ್‌ಘಡದಲ್ಲಿ ನಡೆದ ಸಮಾವೇಶವೊಂದರಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಜನಸಂಖ್ಯೆ ಆಧಾರದ ಮೇಲೆ ಹಕ್ಕುಗಳನ್ನು ನೀಡಬೇಕು ಎಂದು ಕಾಂಗ್ರೆಸ್ ಹೇಳುತ್ತಿದೆ. ಆದರೆ, ದೇಶದ ಬಡವರೇ ಅತಿ ದೊಡ್ಡ ಜನಸಮುದಾಯ ಎಂದು ನಾನು ಹೇಳುತ್ತೇನೆ. ಅವರಿಗೆ ಸಂಪನ್ಮೂಲದ ಮೇಲೆ ಮೊದಲ (3ನೇ ಪುಟಕ್ಕೆ)

## ಕೇಂದ್ರ ಸರ್ಕಾರದಿಂದ ಪಾರದರ್ಶಕವಾಗಿ ಜನಪರ ಯೋಜನೆಗಳ ಜಾರಿ

ಹರಪನಹಳ್ಳಿ, ಅ.3- ಕೇಂದ್ರ ಸರ್ಕಾರ ಜಲ ಜೀವನ್ ಮಿಷನ್ ಯೋಜನೆಯ ಮೂಲಕ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು ಸೇರಿದಂತೆ, ಜನಪರ ಯೋಜನೆಗಳನ್ನು ಪಾರದರ್ಶಕವಾಗಿ ಜಾರಿಗೊಳಿಸಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ನಿಟ್ಟೂರು ಹಾಗೂ ಇತರೆ 6 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯ ಪುನಶ್ಚೇತನ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಹಲವು ಬಾರಿ ತುಂಗಭದ್ರಾ ನದಿ ಪಾತ್ರದ ಅನೇಕ ಗ್ರಾಮಗಳಿಗೆ ಬಂದಿದ್ದೇನೆ. ನದಿ ಹತ್ತಿರ ವಿರುವ ಗ್ರಾಮಗಳಿಗೆ ಕುಡಿಯುವ ನೀರನ್ನು ಕಲ್ಪಿಸ ಬೇಕು ಎಂದು ಹಿಂದಿನ ಶಾಸಕರಿಗೂ ತಿಳಿಸಿದ್ದೆ. ಆದರೆ, ಕೆಲವರು ಇದಕ್ಕೆ ಅಡ್ಡಗಾಲು ಹಾಕಿದ್ದರು ಈ ರೀತಿಯಾಗದಂತೆ ಎಲ್ಲರಿಗೂ ಕುಡಿಯುವ ನೀರಿನ ಸೌಲಭ್ಯ ಅನುಕೂಲವಾಗಲಿದೆ ಎಂದರು.

ಶಾಸಕರು ಕೆ.ಕೆ.ಆರ್.ಡಿ.ಬಿ. ಯೋಜನೆಯಲ್ಲಿ ಅನುದಾನವನ್ನು ಬಳಸಿಕೊಳ್ಳಿ, ಅನುದಾನ ಬರುವವರೆಗೂ ಕಾಯಬೇಕಾಗುತ್ತದೆ. ಈಗಿನ ಶಾಸಕರು ಬಿಜೆಪಿ ಅವಧಿಯಲ್ಲಿನ ಯಾವುದೇ ಕಾಮಗಾರಿಗಳಿಗೆ ಪೂಜೆ, ಉದ್ಘಾಟನೆ ಮಾಡಿದರೂ ಅವು ನಮ್ಮವೇ ಎಂದ ಅವರು, ಮುಂದೆ ನಾನು ಸಂಸದನಾದ ಮೇಲೆ ಶಾಸಕರು, ನಾವು ಸೇರಿ ಕೆಲಸ ಮಾಡುವುದಾಗಿ ತಿಳಿಸಿದರು.



ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಮಾತನಾಡಿ, ನಿಟ್ಟೂರು, ನಿಟ್ಟೂರು ಬಸಾಪುರ, ತಾವರಗುಂದಿ, ಕಡತಿ, ನಂದ್ಯಾಲ, ಒಳತಾಂಡಾ ಮತ್ತು ವಟ್ಲಳ್ಳಿ ಸೇರಿ 6 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯು ಒಟ್ಟು 377.70 ಲಕ್ಷ ರೂ. ವೆಚ್ಚದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಗುತ್ತಿಗೆದಾರರು ಉತ್ತಮ ಗುಣಮಟ್ಟದ ಪೈಪ್‌ಗಳನ್ನು ಅಳವಡಿಸಿ ಕುಡಿಯುವ ನೀರಿನ ಸರಬರಾಜಿಗೆ ಮುಂದಾಗಬೇಕು. ಇದಕ್ಕೆ ಸ್ಥಳೀಯ ಸಾರ್ವಜನಿಕರ ಸಹಾಯ ಅಗತ್ಯವಿದೆ ಎಂದು ಹೇಳಿದರು.

ಸಂಸದರು ಮಾತನಾಡುವ ವೇಳೆ ಕೇಂದ್ರ ಸರ್ಕಾರ 5 ಕೆ.ಜಿ. ಅಕ್ಕಿ ಕೊಡುತ್ತಿದೆ, ಇನ್ನೂ 5 ಕೆ.ಜಿ.ಅಕ್ಕಿಯನ್ನು ರಾಜ್ಯ ಸರ್ಕಾರ ಕೊಡಬೇಕು. ಕೊಡಿಸುವ ಕೆಲಸವನ್ನು ಶಾಸಕರು ಮಾಡಬೇಕು ಎಂದಾಗ ಮಧ್ಯೆ ಪ್ರವೇಶಿಸಿದ ಶಾಸಕರಾದ ಲತಾ ಅವರು ನಾನು ಕಾಂಗ್ರೆಸ್ ಶಾಸಕಿಯಲ್ಲ, ಸರ್ಕಾರಕ್ಕೆ ಬೆಂಬಲ ನೀಡಿದ್ದೇನೆ. ನಾನು ಬಿಜೆಪಿ, ಕಾಂಗ್ರೆಸ್‌ಗೆ ಸೇರಿಲ್ಲ ಎಂದರು. ಹಾಗಾದರೆ ಮುಂದಿನ ಚುನಾವಣೆಯಲ್ಲಿ ನನಗೆ ಸಹಾಯ ಮಾಡಿ ಎಂದು ಸಂಸದರು ಮನವಿ ಮಾಡಿಕೊಂಡರು.


ವೇದಿಕೆಯ ಮುಂಭಾಗದಲ್ಲಿ ಕುಳಿತಿದ್ದ ಮುಖಂಡ ಪಿ.ಮಹಾಬಲೇಶ್ವರಗೌಡ, ನೀವು ಪಕ್ಷೇತರ ಎನ್ನಬಾರದು, ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದೀರ, ಅದಕ್ಕೆ ಕಾಂಗ್ರೆಸ್ ಶಾಸಕರು ಎಂದೇ ಹೇಳಬೇಕು ಎಂದರು.

### ನಾನು ಕಾಂಗ್ರೆಸ್ ಶಾಸಕಿಯಲ್ಲ



ನಾನು ಕಾಂಗ್ರೆಸ್ ಶಾಸಕಿಯಲ್ಲ, ಸರ್ಕಾರಕ್ಕೆ ಬೆಂಬಲ ನೀಡಿದ್ದೇನೆ. ನಾನು ಬಿಜೆಪಿ, ಕಾಂಗ್ರೆಸ್‌ಗೆ ಸೇರಿಲ್ಲ.
- ಎಂ.ಪಿ. ಲತಾ,
ಶಾಸಕರು, ಹರಪನಹಳ್ಳಿ

### ನನಗೆ ಸಹಾಯ ಮಾಡಿ



ಹಾಗಾದರೆ, ಮುಂದಿನ ಚುನಾವಣೆಯಲ್ಲಿ ನನಗೆ ಸಹಾಯ ಮಾಡಿ.
-ಜಿ.ಎಂ. ಸಿದ್ದೇಶ್ವರ,
ಸಂಸದರು, ದಾವಣಗೆರೆ.

**ಭ್ರಷ್ಟಾಚಾರ ತಡೆಯಲು ಸಾಧ್ಯವಿಲ್ಲ:** ಸಂಸದ ಸಿದ್ದೇಶ್ವರ ಮಾತನಾಡುವ ವೇಳೆ ಸಾರ್ವಜನಿಕರೊಬ್ಬರು ಯಾವ ಸರ್ಕಾರ ಅನುದಾನ ಹಾಕಿದರೂ ಹಣ ಯಾರದ್ದು ಎಂದು ಕೇಳಿದಾಗ, ಅದು ನಿಮ್ಮದೇ ದುಡ್ಡು (ಸಾರ್ವಜನಿಕರ ಹಣ), ನಾನೇನು ಮನೆಯಿಂದ (4ನೇ ಪುಟಕ್ಕೆ)

# ಇಡೀ ಜಗತ್ತು ಒಬ್ಬ ವ್ಯಕ್ತಿಯನ್ನು ಗೌರವಿಸುತ್ತಿದ್ದರೆ, ಅದು ಮಹಾತ್ಮ ಗಾಂಧೀಜಿಯನ್ನು ಮಾತ್ರ : ಶಾರದೇಶಾನಂದಜೀ

## ಮಲೇಬೆನ್ನೂರಿನಲ್ಲಿ ಗಾಂಧಿ ಸ್ಮೃತಿ ಕಾರ್ಯಕ್ರಮ



ಮಲೇಬೆನ್ನೂರು, ಅ.3- ಇಡೀ ಜಗತ್ತು ಒಬ್ಬ ವ್ಯಕ್ತಿಯನ್ನು ಗೌರವಿಸುತ್ತಿದ್ದರೆ, ಅದು ಮಹಾತ್ಮ ಗಾಂಧೀಜಿಯನ್ನು ಮಾತ್ರ. ಅವರ ಅಹಿಂಸಾ ಹೋರಾಟ ಹಾಗೂ ಆದರ್ಶದ ಬದುಕು ಅದಕ್ಕೆ ಕಾರಣವಾಗಿದೆ ಎಂದು ಹರಿಹರದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದಜೀ ಮಹಾರಾಜ್ ಬಣ್ಣಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಭಾ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ಗಾಂಧಿ ಸ್ಮೃತಿ ಹಾಗೂ ಬೃಹತ್ ಜನಜಾಗೃತಿ ಸಮಾವೇಶದ ದಿನ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಗಾಂಧೀಜಿ ಅವರು ಅಹಿಂಸಾ ಹೋರಾಟದ ಮೂಲಕವೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಅಂತಹ ವ್ಯಕ್ತಿಯನ್ನು ಕುರಿತು ಡಿ.ಜಿ. ತೆಂಡೂಲ್ಕರ್ ಅವರು 8 ಸಂಪುಟಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲ, ಆ ಸಂಪುಟಗಳಿಂದಾಗಿ ಅವರೂ ಜಗತ್ಪ್ರಸಿದ್ಧರಾದರು ಎಂದರು.

ಕೋಪನೇ ಬರದಂತಹ ಒಬ್ಬ ವ್ಯಕ್ತಿ ಗಾಂಧೀಜಿ ಎಂದು ದ.ರಾ. ಬೇಂದ್ರೆ ಹೇಳಿದ್ದಾರೆ. ಗಾಂಧೀಜಿ ಕುರಿತು ಜಗತ್ತಿನ ಪ್ರಸಿದ್ಧ ಸಾಕಷ್ಟು ಮೆಚ್ಚುಗೆಯ ಮಾತುಗಳನ್ನು ಹೇಳಿದ್ದಾರೆ. ಅಂತಹ ವ್ಯಕ್ತಿ ಕುರಿತು ಈ ದಿನ ನಾನು ಇಲ್ಲಿ ಮಾತನಾಡುವುದಕ್ಕೂ ತುಂಬಾ ಹೆಮ್ಮೆ ಎನಿಸುತ್ತಿದೆ ಎಂದು ಸ್ವಾಮಿ ಶಾರದೇಶಾನಂದಜೀ ಸಂತಸ ವ್ಯಕ್ತಪಡಿಸಿದರು.

ಗಾಂಧೀಜಿ, ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಬಗ್ಗೆ ನಿಮ್ಮ ಮಕ್ಕಳಿಗೆ ತಿಳಿಸಿ ಮತ್ತು ಅವರ ಸರಳ ಜೀವನ ನಮ್ಮ ಬದುಕಿನ ಆದರ್ಶವಾಗಬೇಕೆಂದರು.

ಹರಿಹರ ಆರೋಗ್ಯ ಮಾತೆ ಬಸಿಲಿಕ ಚರ್ಚ್ ಪ್ರಧಾನ ಗುರುಗಳಾದ ಫಾದರ್ ಜಾರ್ಜ್ ಮಾತನಾಡಿ, ಮದ್ಯಪಾನ ತೊಲಗಿಸಬೇಕೆಂಬ ಗಾಂಧೀಜಿ ಅವರ ಪ್ರಮುಖ ಉದ್ದೇಶವನ್ನು ಈಡೇರಿಸುವ ನಿಟ್ಟಿನಲ್ಲಿ ಡಾ. ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಹೆಜ್ಜೆ ಇಟ್ಟಿದ್ದಾರೆ.

ಕರ್ನಾಟಕ ಜಮಾ ಅತೆ ಇಸ್ಲಾಮೀ ಹಿಂದ್ ರಾಜ್ಯ ಕಾರ್ಯದರ್ಶಿ ಜನಾಬ್ ಮಹಮ್ಮದ್ ಕುಂಞ ಮಾತನಾಡಿ, ಗಾಂಧೀಜಿ ಎಂದರೆ ಸತ್ಯ ಸರಳ, ಗೌರವ, ಅಹಿಂಸಾ, ಭ್ರಾತೃತ್ವ, ಆದರ್ಶವಾಗಿದ್ದು, ಅವರಂತಹ ಬದುಕಿನ ಸ್ವಲ್ಪ ಭಾಗವನ್ನಾದರೂ ನಾವು ಅಳವಡಿಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ ಎಂದು ಪ್ರತಿಪಾದಿಸಿದರು.

ಗಾಂಧೀಜಿಯ ಬದುಕಿನ ಪಾಠವನ್ನು ನಾವು ಮಕ್ಕಳಿಗೆ ತಿಳಿಸುವ ಅಗತ್ಯತೆ ಇದೆ. ಏಕೆಂದರೆ ನಾವು 'ನಶೆ'ಯಿಂದ ಜನರನ್ನು ಹೊರತರಬೇಕಿದ್ದು, ಅದಕ್ಕಾಗಿ ಡಾ. ವೀರೇಂದ್ರ ಹೆಗ್ಗಡೆ ಅವರು ಈಗಾಗಲೇ ಸಂಕಲ್ಪ ಮಾಡಿ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಈ ಕೆಟ್ಟ ಮದ್ಯದ ವಿರುದ್ಧ 6ನೇ ಶತಮಾನದಲ್ಲೇ ಪ್ರವಾದಿ ಮಹಮ್ಮದ್ ಪೈಗಂಬರ್ ಅವರು ಜಾಗೃತಿ ಮೂಡಿಸುವ ಕೆಲಸ ಮಾಡಿದ್ದರ ಪರಿಣಾಮ ಇವತ್ತು ಮುಸ್ಲಿಮರು ಮದ್ಯಪಾನದಿಂದ ದೂರವಿದ್ದಾರೆ. ಇದೇ ರೀತಿ ವೀರೇಂದ್ರ ಹೆಗ್ಗಡೆ ಅವರ ಈ ಹೋರಾಟ ಮುಂದೊಂದು ದಿನ ಖಂಡಿತಾ ಫಲ ನೀಡಲಿದೆ ಎಂಬ ವಿಶ್ವಾಸ ನನಗಿದೆ. ತಮ್ಮ ಪತಿ ಮದ್ಯ ಸೇವಿಸುವುದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿದ್ದ ಶೇ.90 ರಷ್ಟು ಮಹಿಳೆಯರು ತಮ್ಮ ಮಕ್ಕಳಿಗಾಗಿ ಬದುಕಿದ್ದಾರೆಂದು ವರದಿ ಹೇಳುತ್ತದೆ. ಅಂತಹ ಮದ್ಯ ಎಲ್ಲಾ ಕೆಡಕುಗಳ ತಾಯಿಯಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಜನ ಮದ್ಯದಿಂದ ಹೊರಬರುವ ದೊಡ್ಡ ಮನಸ್ಸು ಮಾಡುವ ಮೂಲಕ ವೀರೇಂದ್ರ ಹೆಗ್ಗಡೆ ಅವರ ಪ್ರಮಾಣ ಪ್ರಯತ್ನವನ್ನು ಸಕಾರಗೊಳಿಸಿ ಎಂದು ಮಹಮ್ಮದ್ ಕುಂಞ ಮನವಿ ಮಾಡಿದರು.

ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಎಂ.ಬಿ. ನಾಗರಾಜ್ ಕಾಕನೂರು ಅವರು ನವ ಜೀವನ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದರು. ಜಿಲ್ಲಾ ಜನ ಜಾಗೃತಿ ವೇದಿಕೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೊನ್ನಾಳಿ ಬಾಬಣ್ಣ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ನೂತನ ಉಪಾಧ್ಯಕ್ಷ ಸಿರಿಗೆರೆ ನಾಗನಗೌಡ್ರು, ಸದಸ್ಯರಾದ ರಾಜಶೇಖರ್ ಕೊಂಡಜ್ಜಿ, ಬೆಣ್ಣೆಹಳ್ಳಿ ಹಾಲೇಶಪ್ಪ, ಅಣಬೇರು ಮಂಜಣ್ಣ, ಕೆ.ಎಸ್. ಶುಭ, ಪದ್ಮರಾಜ್ ಜೈನ್, ಜಿಗಳಿ ಪ್ರಕಾಶ್, ಬೆಳ್ಳೂಡಿ ರವಿಶಂಕರ್, ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟಿನ ಬಿ. ಚಿದಾನಂದಪ್ಪ, ಬಿ.ನಾಗೇಂದ್ರಪ್ಪ, ಬಿ. ನಾಗೇಶ್, ಬಿ.ಉಮಾಶಂಕರ್, ಜಿಗಳಿಯ ಜಿ. ಆನಂದಪ್ಪ, ಗೌಡ್ರ ಬಸವರಾಜಪ್ಪ, ನಾಗಸನಹಳ್ಳಿ ಮಹೇಶ್ವರಪ್ಪ, ರೈಸ್ ಮಿಲ್ ಮಾಲೀಕರಾದ ಯಕ್ಕನಹಳ್ಳಿ ಬಸವರಾಜಪ್ಪ, ತಳಸದ ಬಸವರಾಜ್, ಬಿ. ವೀರಯ್ಯ, ಯಲವಟ್ಟಿಯ ಡಿ. ಯೋಮಕೇಶ್ವರಪ್ಪ, ಜಿ. ಆಂಜನೇಯ, ಆನಂದಚಾರ್, ಬೆಣ್ಣೆಹಳ್ಳಿ ಬಸವರಾಜ್, ಮಲ್ಲಿಕಾರ್ಜುನ್ ಕಲಾಲ್, ಹೆಚ್.ಎಂ. ಸದಾನಂದ್, ಕೊಕ್ಕನೂರು ಒಕ್ಕೂಟದ ಅಧ್ಯಕ್ಷ ಹನುಮಂತರಾಯ, ಯೋಜನೆಯ ಮೇಲ್ವಿಚಾರಕರಾದ ಚಂದ್ರಪ್ಪ, ಗಂಗಾಧರ್, ಹರೀಶ್, ರಕ್ಷಿತಾ, ಸಂಪತ್‌ಲಕ್ಷ್ಮಿ, ಸಂತೋಷಿನಿ, ಜ್ಞಾನವಿಕಾಸ ಸಮನ್ವಯಾಧಿಕಾರಿಗಳಾದ ಸವಿತಾ, ಭಾರತಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೊಮಾರನಹಳ್ಳಿಯಲ್ಲಿ ನಡೆದ 1705ನೇ ಮದ್ಯವರ್ಜನಾ ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮಾತನಾಡಿದರು.

ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ ಸ್ವಾಗತಿಸಿದರು. ಜನಜಾಗೃತಿ ವೇದಿಕೆ ಯೋಜನಾಧಿಕಾರಿ ನಾಗರಾಜ್ ಕುಳ್ಳಾಲ್ ಪ್ರಾಸ್ತಾವಿಕವಾಗಿ ಮಾತನಾಡಿ ದರು. ಮೇಲ್ವಿಚಾರಕ ಮಾರುತಿಗೌಡ ಕಾರ್ಯ ಕ್ರಮ ನಿರೂಪಿಸಿದರೆ, ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ವಂದಿಸಿದರು.

## ನಗರದಲ್ಲಿ ಇಂದು 'ಬುದ್ಧನ ಬೆಳಕು' ನಾಟಕ ಪ್ರದರ್ಶನ

ದಾವಣಗೆರೆ, ಅ. 3- ಮಾನವ ಬಂಧುತ್ವ ವೇದಿಕೆ ಹಾಗೂ ಸತೀಶ್ ಜಾರಕಿಹೊಳಿ ಫೌಂಡೇಶನ್ ಸಹಯೋಗದೊಂದಿಗೆ ನಾಳೆ ದಿನಾಂಕ 4ರ ಬುಧವಾರ ಬಿ.ಐ.ಇ.ಟಿ. ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ 'ಬುದ್ಧನ ಬೆಳಕು' ನಾಟಕ ಪ್ರದರ್ಶನ ಹಾಗೂ ಕಲೆಗಳ ಕಲರವ ಶಿಬಿರದ ಸಮಾರೋಪ ನೆರವೇರಲಿದೆ.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ ರಾಮಚಂದ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸತೀಶ್ ಜಾರಕಿಹೊಳಿ ಫೌಂಡೇಶನ್ ಪ್ರಾಯೋಜಕತ್ವದಲ್ಲಿ ಕಲೆಗಳ ಕಲರವ ಎಂಬ ಶಿಬಿರ ಕಳೆದ 15 ದಿನಗಳಿಂದ ಹನಗವಾಡಿಯ ಮೈತ್ರಿವನದಲ್ಲಿ ನಡೆಯುತ್ತಿದೆ. ಡಿಂಗ್ರಿ ನರೇಶ್ ಅವರು ತರಬೇತಿ ನೀಡಿದ್ದಾರೆ. ದಾವಣಗೆರೆಯಲ್ಲಿ 'ಬುದ್ಧನ ಬೆಳಕು' ನಾಟಕದ ಮೊದಲ ಪ್ರದರ್ಶನ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಇತರೆ ಭಾಗದಲ್ಲಿ ಪ್ರದರ್ಶನ ನಡೆಸಲಾಗುವುದು ಎಂದು ತಿಳಿಸಿದರು.

ಬುಧವಾರ ಸಂಜೆ 6.30 ಕ್ಕೆ ನಡೆಯುವ ಕಾರ್ಯಕ್ರಮಕ್ಕೆ ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿ ಸಾನ್ನಿಧ್ಯ ವಹಿಸುವರು. ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ಡಾ.ಎಂ.ಜಿ. ಈಶ್ವರಪ್ಪ, ಬಿ.ಎನ್. ಮಲ್ಲೇಶ್, ರವಿನಾಯ್ಕ, ನಾಟಕ ರಚನೆಕಾರ ವಿಕಾಸ್ ಆರ್. ಮೌರ್ಯ ಇತರರು ಭಾಗವಹಿಸುವರು ಎಂದು ಹೇಳಿದರು.

ನಿರ್ದೇಶಕ ಡಿಂಗ್ರಿ ನರೇಶ್ ಮಾತನಾಡಿ, 'ಬುದ್ಧನ ಬೆಳಕು' ಈಗಿನ ಭಾರತದಲ್ಲಿನ ಸಂಕಷ್ಟ, ತಲ್ಲಣಗಳಿಗೆ ಸೂಕ್ತ ಪರಿಹಾರ ಒದಗಿಸಬಲ್ಲ ಔಷಧಿ ಆಗಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಲೋಕಿಕೆರೆ ಆಂಜಿನಪ್ಪ, ರಾಘು ದೊಡ್ಡಮನಿ, ಮಾಡಾಳು ಶಿವಕುಮಾರ್, ಕರಿಯಪ್ಪ ಮಾಳಿಗೇರ್ ಇದ್ದರು.

## ಉಕ್ರೇನ್‌ಗೆ ನೆರವು ನಿಲ್ಲಿಸಿದ ಅಮೆರಿಕ

ವಾಷಿಂಗ್ಟನ್, ಅ. 3 - ಸಮರ ಪೀಡಿತ ಉಕ್ರೇನ್‌ಗೆ ಮತ್ತಷ್ಟು ನೆರವು ನೀಡುವುದನ್ನು ಅಮೆರಿಕ ಸ್ಥಗಿತಗೊಳಿಸಿದೆ.

ನವೆಂಬರ್ 17ರವರೆಗೆ ಹೆಚ್ಚುವರಿ ನೆರವು ನೀಡುವುದನ್ನು ತಡೆಯಲು ಅಮೆರಿಕದ ಶಾಸನ ಸದನಗಳು ನಿರ್ಧರಿಸಿವೆ. ಸದ್ಯಕ್ಕೆ ಉಕ್ರೇನ್‌ಗೆ ಹೆಚ್ಚಿನ ನೆರವು ನೀಡಬಾರದು ಎಂದು ರಿಪಬ್ಲಿಕನ್ ಹಾಗೂ ಡೆಮಾಕ್ರಾಟ್ ಪಕ್ಷಗಳೆರಡೂ ನಿರ್ಧಾರ ತೆಗೆದುಕೊಂಡಿವೆ.

ರಷ್ಯಾ ದಾಳಿಯನ್ನು ಎದುರಿಸಲು ಉಕ್ರೇನ್‌ಗೆ ಪೂರ್ಣ ನೆರವು ನೀಡುವುದಾಗಿ ಅಮೆರಿಕ ಹೇಳುತ್ತಾ ಬಂದಿತ್ತು.

ಕಳೆದ ವಾರ ಅಮೆರಿಕದ ಶಾಸಕರು ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜೆಲೆನ್‌ಸ್ಕಿ ಅವರನ್ನು ಭೇಟಿ ಮಾಡಿದ್ದರು. ನಾವು ಯುದ್ಧ ಗೆಲ್ಲುತ್ತಿದ್ದೇವೆ, ಆದರೆ ಹೆಚ್ಚಿನ ನೆರವು ಬೇಕು ಎಂದು ಜೆಲೆನ್‌ಸ್ಕಿ ಹೇಳಿದ್ದರು.

## ರಾಮ ಸೇತುವೆ ರಾಷ್ಟ್ರೀಯ ಸ್ಮಾರಕದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ,ಅ. 3 – ರಾಮ ಸೇತುವೆಯನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸುವಂತೆ ದಾಖಲಾಗಿದ್ದ ಅರ್ಜಿಯ ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂ ಕೋರ್ಟ್, ಇದು ಸರ್ಕಾರದ ಆಡಳಿತಾತ್ಮಕ ವಿಷಯ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠದ ಎದುರು ಹಿಂದೂ ಸಂಘಟನೆಯೊಂದು ಈ ಬಗ್ಗೆ ಅರ್ಜಿ ದಾಖಲಿಸಿತ್ತು.

## ಜಾತಿ ಗಣತಿಗೆ ಕೇಂದ್ರ ಸಚಿವೆಯ ಒತ್ತಾಯ

ರಾಯ್ ಬರೇಲಿ, ಅ. 3 – ದೇಶಾದ್ಯಂತ ಜಾತಿ ಗಣತಿ ನಡೆಸಬೇಕು ಹಾಗೂ ಇತರೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ ರೂಪಿಸಬೇಕು ಎಂದು ಕೇಂದ್ರ ಸಚಿವೆ ಅನುಪ್ರಿಯ ಪಟೇಲ್ ಬೇಡಿಕೆ ಮುಂದಿಟ್ಟಿದ್ದಾರೆ. ಅಪ್ನಾ ದಳ್ (ಎಸ್) ನಾಯಕಿಯಾಗಿರುವ ಅನುಪ್ರಿಯ ಪಟೇಲ್, ಪಕ್ಷದ ಸಭೆಯಲ್ಲಿ ಮಾತನಾಡುತ್ತಾ, ಹಿಂದುಳಿದ ವರ್ಗಗಳ ನಿಖರ ಮಾಹಿತಿ ಪಡೆಯಲು ಜಾತಿ ಗಣತಿ ನಡೆಸಬೇಕಿದೆ ಎಂದಿದ್ದಾರೆ. ಇತರೆ ಹಿಂದುಳಿದ ವರ್ಗದವರು ಅತಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ ರೂಪಿಸುವ ಅಗತ್ಯವಿದೆ ಎಂದವರು ತಿಳಿಸಿದ್ದಾರೆ.

# ಶರಣರು ಸಾವಿರವಾದರೂ, ನಿಜಶರಣ ಅಂಬಿಗರ ಚೌಡಯ್ಯ ಒಬ್ಬರೇ

## ಹರಪನಹಳ್ಳಿ ತಾಲ್ಲೂಕು ಗಂಗಾಮತ ಸಮಾಜದ ಅಧ್ಯಕ್ಷ, ನಾಟಿ ವೈದ್ಯ ಡಾ. ಹೊಸೂರಪ್ಪ ಬಡಮ್ಮನವರ ಮೆಚ್ಚುಗೆ



ಹರಪನಹಳ್ಳಿ, ಅ.3- ಶರಣರು ಸಾವಿರವಾದರೂ ನಿಜಶರಣ ಅಂಬಿಗರ ಚೌಡಯ್ಯ ಒಬ್ಬರೇ. ಇವರ ಜಯಂತ್ಯೋತ್ಸವ ಆಚರಣೆ ನಮ್ಮಗಳ ಹೆಮ್ಮೆ ಎಂದು ತಾಲ್ಲೂಕು ಗಂಗಾಮತ ಸಮಾಜದ ಅಧ್ಯಕ್ಷ, ನಾಟಿ ವೈದ್ಯ ಡಾ. ಹೊಸೂರಪ್ಪ ಬಡಮ್ಮನವರ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದ ಆಂಜನೇಯ ಸ್ವಾಮಿ ಸಮುದಾಯ ಭವನದಲ್ಲಿ ಕರೆಯಲಾಗಿದ್ದ ಅಂಬಿಗರ ಚೌಡಯ್ಯ ಜಯಂತ್ಯೋತ್ಸವದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸರ್ವಜನಾಂಗದೊಂದಿಗೆ ಸಾಮರಸ್ಯದೊಂದಿಗೆ ಬದುಕುವ ಗಂಗಾಮತ ಸಮಾಜದ ಬಂಧುಗಳು, ಶಾಂತಿ ಮತ್ತು ಸೌಹಾರ್ದ ಜೀವನ ಬಯಸುವವರು. ಇಂತಹ ಸಮಾಜದ ಆರಾಧ್ಯ ದೈವ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತ್ಯೋತ್ಸವವನ್ನು ಜನವರಿ 2024ರಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ನಿವೃತ್ತ ಅಭಿಯಂತರ ಗಂಗಾಧರ್ ಮಾತನಾಡಿ, ಹೊಂದಾಣಿಕೆ ಸ್ವಭಾವದ, ಮೃದು ಧೋರಣೆಯ ಗಂಗಾಮತ ಸಮಾಜ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಆಚರಿಸಲು ನಿರ್ಧರಿಸಿದ್ದು, ಆಚರಣೆ ಯಾವೊಂದು ಅನ್ಯ ಸಮಾಜದೊಂದಿಗಿನ ಪೈಪೋಟಿ ಮತ್ತು ತೋರಿಕೆಗಲ್ಲ. ಬದಲಾಗಿ ನಮ್ಮ ಸಮಾಜದ ಆರಾಧ್ಯ ದೈವ ಚೌಡಯ್ಯನವರ ಉತ್ಸವ ಸಮಾಜದಲ್ಲಿ ಹುಟ್ಟಿದ ನಮಗೆ ಆತ್ಮತೃಪ್ತಿಗೋಸ್ಕರ ಎಂದರು.

ಉಪಾಧ್ಯಕ್ಷ ಜಾಲಗಾರ ಕೊಟ್ರೇಶ್ ಮಾತನಾಡಿ, ನೇರ ಮತ್ತು ನಿಷ್ಠೂರ ನುಡಿಗಳಿಂದ ಜಗತ್ತಿಗೇ ವಚನಗಳನ್ನು ಸಾರಿದ ಚೌಡಯ್ಯನವರ ಜಯಂತ್ಯೋತ್ಸವ ತಾಲ್ಲೂಕು ಆಡಳಿತದ ಸರಳ ಮತ್ತು ಸುಂದರ ಆಚರಣೆಗೆ ಸೀಮಿತವಾಗದೆ. ಇಡೀ ಸಮಾಜಕ್ಕೊಂದು ಸಂದೇಶ ಸಾರುವ ಉತ್ಸವವಾಗಲಿ ಎಂದು ಅದ್ದೂರಿ ಆಚರಣೆಗೆ ಸಿದ್ಧರಾಗಿದ್ದೇವೆ ಎಂದರು.

ಇದೇ ವೇಳೆ ಗಂಗಾಮತ ಸಮಾಜದ ತಾಲ್ಲೂಕು ಅಧ್ಯಕ್ಷ ಹೊಸೂರಪ್ಪ ಅವರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ಸಾಸ್ವಿಹಳ್ಳಿ ಸಣ್ಣಿಂಗಪ್ಪ, ಪ್ರಧಾನ ಕಾರ್ಯದರ್ಶಿ ಪವಾಡಿ ದೇವೇಂದ್ರ, ಖಜಾಂಚಿ ದುರ್ಗೇಶ್, ನಿವೃತ್ತ ಮೀನುಗಾರಿಕೆ ನಿರ್ದೇಶಕ ಬಸವರಾಜ್ ಪವಾಡಿ, ಚಿಗಟೇರಿ ಸುರೇಶ್, ಶಿಕ್ಷಕರಾದ ಶಿವಾನಂದಪ್ಪ, ಅಂಜಿನಪ್ಪ, ರಾಜಶೇಖರ್, ಪಿ.ಸಿದ್ದೇಶ್, ಹನುಮಂತಪ್ಪ, ಪಕ್ಕೀರಪ್ಪ, ದ್ಯಾಮಪ್ಪ, ಕೊಂಗನಹೊಸೂರು ಮಹಾಂತೇಶ್, ಹಲವಾಗಲು ಚಂದ್ರಪ್ಪ ಸೇರಿದಂತೆ ಇತರರು ಇದ್ದರು.

## 41 ರಾಯಭಾರಿಗಳನ್ನು ಕರೆಸಿಕೊಳ್ಳಲು ಕೆನಡಾಗೆ ಭಾರತದ ಸೂಚನೆ

ನವದೆಹಲಿ, ಅ. 3 – ಅಕ್ಟೋಬರ್ 10ರ ಒಳಗೆ ತನ್ನ 41 ರಾಯಭಾರಿಗಳನ್ನು ದೇಶದಿಂದ ವಾಪಸ್ ಕರೆಸಿಕೊಳ್ಳುವಂತೆ ಕೆನಡಾಗೆ ಭಾರತ ತಿಳಿಸಿದೆ ಎಂದು ಫೈನಾನ್ಷಿಯಲ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ. ಭಾರತದಲ್ಲಿನ ರಾಯಭಾರಿ ಸಂಸ್ಥೆಯ ಗಾತ್ರವನ್ನು ಕಡಿಮೆ ಮಾಡಬೇಕೆಂದು 12 ದಿನಗಳ ಹಿಂದೆ ಕೆನಡಾಗೆ ಭಾರತ ತಿಳಿಸಿತ್ತು.

## ಎಸ್‌ಪಿಎಸ್‌ಎಸ್ ಕಾಲೇಜಿನಲ್ಲಿ ಗಾಂಧೀಜಿ ಜಯಂತಿ



ದಾವಣಗೆರೆ, ಅ. 3 - ನಗರದ ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಪಿ.ಎಸ್.ಎಸ್. ಪಿಯು ಸೈನ್ಸ್ ಕಾಲೇಜಿನಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು. ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜೀವನ ಚರಿತ್ರೆಯ ಕುರಿತಂತೆ ವಿದ್ಯಾರ್ಥಿನಿ ಕು. ಸುವಿದ ಮತ್ತು ಮೆಹರ್ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಪಿ. ರುದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆ.ಸಿ. ವಿಜಯ್ ಕುಮಾರ್ ನಿರೂಪಿಸಿದರು. ವಿನಯ್ ಕುಮಾರ್ ವಂದಿಸಿದರು.


### ಸವಿತಾ ಸಮಾಜದ ಲಕ್ಷ್ಮಮ್ಮ ನಿಧನ



ದಾವಣಗೆರೆ ಕೆಟಿಜೆ ನಗರ, 16ನೇ ಕ್ರಾಸ್ ವಾಸಿ ಸವಿತಾ ಸಮಾಜದ ಮುಖಂಡರಾದ ದಿ॥ ಎನ್.ಎಸ್. ವೆಂಕಟರಮಣಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಎನ್.ಎಸ್. ಲಕ್ಷ್ಮಮ್ಮ**

ಇವರು ದಿನಾಂಕ : 03.10.2023ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಮೃತರು ಐವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 04.10.2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕರಿಗೆ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : 83107 48946**

॥ ಶ್ರೀ ಕುಲದೇವತಾ ಪ್ರಸನ್ನ ॥

### ಪುಣ್ಯಸ್ಮರಣೆ



**ದಿ. ಕಚವಿ ಗಂಗಾಧರ್ ನಾಗಪ್ಪ ವಿಠ್ಠಲಕರ್**

ನಿಧನ : 20.09.2019

*ನೀವು ನಮ್ಮನ್ನಗಲಿ ನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ;*

**ಧರ್ಮಪತ್ನಿ : ಶ್ರೀ ಪದ್ಮಾವತಿ ಮತ್ತು ಮಕ್ಕಳು, ಸಹೋದರರು, ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.**

- ಶ್ರೀ ಮಾರುತಿ ಜ್ಯೂಯಲರ್ಸ್, ಚೌಕಿಪೇಟೆ, ದಾವಣಗೆರೆ.
- ಶ್ರೀ ವೆಂಕಟೇಶ್ವರ ಜ್ಯೂಯಲರಿ ಮಾರ್ಟ್, ಚೌಕಿಪೇಟೆ, ದಾವಣಗೆರೆ.
- ಅಮೃತೇಶ್ವರಿ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ.

### ಪುಣ್ಯಸ್ಮರಣೆ



**ಅಂ. ಎಸ್.ಎಂ. ಶಾಂತಮ್ಮ (ಬಾಬಿ)**

ನೀವು ನಮ್ಮನ್ನಗಲಿ ಇಂದಿಗೆ (04.10.2023) ಐದು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತಿ: **ಜೇರಟಗಿ ಎಸ್.ಎಂ. ರೇವಣಸಿದ್ದಯ್ಯ ಶಾಸ್ತ್ರಿಗಳು**

ಅರ್ಚಕರು, ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ, ವಿನೋಬನಗರ, ದಾವಣಗೆರೆ.

**ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.**

**ಸಿದ್ದೇಶ್ವರ ಮಠ ಹಾಗೂ ಕರಿಸಿದ್ದೇಶ್ವರ ಮಠದ ಬಂಧುಗಳು**

ಮೆಘಾ ಫಿಕ್ಸ್, ವಿನೋಬನಗರ, ದಾವಣಗೆರೆ. ಮೊ: 98808 99895

### ಬಿಳಿಚೋಡು ಗ್ರಾಮದ ಅಜಿತ್ ಕುಮಾರ್ ಎಚ್.ಪಿ. ನಿಧನ



ಜಗಳೂರು ತಾಲ್ಲೂಕು, ಬಿಳಿಚೋಡು ಗ್ರಾಮದ ವಾಸಿ ಅಜಿತ್ ಕುಮಾರ್ ಎಚ್.ಪಿ. (73) ಇವರು ದಿನಾಂಕ 03.10.2023ರ ಮಂಗಳವಾರ ಸಂಜೆ 4ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04.10.2023ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮವಾದ ಜಗಳೂರು ತಾಲ್ಲೂಕು, ಬಿಳಿಚೋಡು ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.


## ಲ್ಯಾಪ್‌ಟಾಪ್‌ಗೆ ಅರ್ಜಿ

ದಾವಣಗೆರೆ, ಅ.3- ಪ್ರಥಮ - ದ್ವಿತೀಯ ಪಿಯುಸಿ ಯ ಕಾರ್ಮಿಕರ ಮಕ್ಕಳು ಉಚಿತ ಲ್ಯಾಪ್‌ಟಾಪ್‌ಗೆ ಅರ್ಜಿ ಆಹ್ವಾನಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 08192-237332.

## ನವಕರ್ನಾಟಕ ಪ್ರಕಾಶನದ ಸ್ಥಾಪಕ ನಿರ್ದೇಶಕ ಪತ್ರಕರ್ತ ಸಿಆರ್‌ಕೆ ರಾವ್ ಇನ್ನಿಲ್ಲ



ಬೆಂಗಳೂರು, ಅ. 3 - ಐದು ದಶಕಗಳಿಗೂ ಹೆಚ್ಚು ಕಾಲ ಪತ್ರಕರ್ತರಾಗಿ, ಸಂಘಟಕರಾಗಿ ಸೇವೆ ಸಲ್ಲಿಸಿದ ಸಿ.ಆರ್.ಕೃಷ್ಣರಾವ್ ಅವರು ಬೆಂಗಳೂರಿನಲ್ಲಿ ಮಂಗಳವಾರ ನಿಧನರಾಗಿದ್ದಾರೆ. ಮೃತರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು.

ಸಿಆರ್‌ಕೆ ಎಂದೇ ಖ್ಯಾತರಾಗಿದ್ದ ಅವರು ಪತ್ನಿ ಶಾರದ, ಇಬ್ಬರು ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

'ಜನಶಕ್ತಿ' ಪತ್ರಿಕೆಯಲ್ಲಿ ವೃತ್ತಿ ಜೀವನ ನಡೆಸಿದ ಅವರು, ವಿ.ಎನ್.ಸುಬ್ಬರಾವ್ ಅವರ ಜೊತೆಗೆ ಸೇರಿ ಸಿನಿಮಾಕ್ಕೆಂದೇ ಮೇನಕಾ ಪತ್ರಿಕೆಯನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಅವರದು. ಹೊಸತು ಪತ್ರಿಕೆ ಅಂಕಣಕಾರರಾಗಿ, ನವಕರ್ನಾಟಕ ಪ್ರಕಾಶನದ ಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ಖಜಾಂಚಿ ಮತ್ತು ಕಾರ್ಯದರ್ಶಿಯಾಗಿ, ಕೆಯುಡಬ್ಲ್ಯೂಜೆ ರಜತ ಮಹೋತ್ಸವದ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದರು.

ಕೆಯುಡಬ್ಲ್ಯೂಜೆಯಲ್ಲಿ ಕೇವಲ 150 ಸದಸ್ಯರಿದ್ದ ಸಂದರ್ಭದಲ್ಲಿ ರಾಜ್ಯದಾದ್ಯಂತ ಸಂಘಟನೆಯನ್ನು ಆ ಕಾಲಘಟ್ಟದಲ್ಲಿ ಬೆಳೆಸಿದ ಹಿರಿಮೆ ಅವರದು. ಸಿಆರ್‌ಕೆ ಅವರ ಸೇವೆ ಸ್ಮರಿಸಿ 75ನೇ ಅಮೃತ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕೆಯುಡಬ್ಲ್ಯೂಜೆ ಅವರ ಮನೆಗೆ ತೆರಳಿ ಅತ್ಯಂತ ಅಭಿಮಾನದಿಂದ ಸನ್ಮಾನಿಸಿತ್ತು ಎಂದು ಪತ್ರಕರ್ತರ ಸಂಘ ನೆನಪು ಮಾಡಿಕೊಂಡಿದೆ.

**ಸಿಆರ್‌ಕೆ ಅಗಲಿಕೆಗೆ ಪತ್ರಕರ್ತರ ಸಂಘ ಸಂತಾಪ :** ಹಿರಿಯ ಚೇತನ ಸಿ.ಆರ್.ಕೃಷ್ಣರಾವ್ ಅವರ ನಿಧನಕ್ಕೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ತೀವ್ರ ಸಂತಾಪ ವ್ಯಕ್ತಪಡಿಸಿದೆ. ಪತ್ರಕರ್ತರಾಗಿ ಮತ್ತು ಸಂಘಟಕರಾಗಿ ದುಡಿದ ಸಿ ಆರ್ ಕೆ ನಡೆದಾಡುವ ಮಾಹಿತಿ ಕೋಶ ಎಂದೇ ಗುರುತಿಸಿಕೊಂಡಿದ್ದರು. ಅವರ ನಿಧನದಿಂದ ಸುದ್ದಿ ಮನೆಯ ಹಿರಿಯ ಕೊಂಡಿಯೊಂದು ಕಳಚಿದಂತಾಗಿದೆ ಎಂದು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹೇಳಿದ್ದಾರೆ.


### ಸುಶಾಂತ್ ಅಂಬರ್‌ಕರ್ ನಿಧನ



ದಾವಣಗೆರೆ ಹಳೇ ಬಸ್ ನಿಲ್ದಾಣದ ಎದುರು ಇರುವ ಅಂಬರ್‌ಕರ್ ವಿರೂಪಣ್ಣ ಟೆಕ್ಸ್‌ಟೈಲ್ಸ್ ಪಾಲುದಾರರಾದ **ಅಂಬರ್‌ಕರ್ ರಮೇಶ್ ರವರ ಹಿರಿಯ ಪುತ್ರರಾದ**

**ಸುಶಾಂತ್ ಅಂಬರ್‌ಕರ್**

ಇವರು ದಿನಾಂಕ : 03.10.2023ರ ಮಂಗಳವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 41 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 04.10.2023 ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 98455 98787**

### ಶ್ರೀಮತಿ ಕುಂದೂರು ಗೌರಮ್ಮ ನಿಧನ



ದಾವಣಗೆರೆ ತಾಲ್ಲೂಕು ಕತ್ತಲಗೆರೆ ಗ್ರಾಮದ ವಾಸಿ

**ಶ್ರೀಮತಿ ಕುಂದೂರು ಗೌರಮ್ಮ**

**(ಆನಂದಪ್ಪ ಇವರ ಧರ್ಮಪತ್ನಿ )** ಇವರು, ದಿನಾಂಕ : 02.10.2023ರ ಸೋಮವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 73 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. : 04.10.2023ರ ಬುಧವಾರ ಮಧ್ಯಾಹ್ನ 11.00 ಘಂಟೆಗೆ ಕತ್ತಲಗೆರೆಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ :**

**ಫೋನ್ : 9535667931, 9880907280**

### ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



**ದಿ|| ವಿ.ಓ. ಅಂತೋಣಿ**

**ನೀವು ನಮ್ಮನ್ನಗಲಿ ಹನ್ನೊಂದು ವರ್ಷಗಳಾದವು)**

**ಸದಾ ನಿಮ್ಮ ಸ್ಮರಣೆಯಲ್ಲಿರುವ...**

**ಪತ್ನಿ, ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು**


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಚಂದ್ರಶೇಖರ ರಾವ್ ಎನ್.ಡಿ.ಎ. ಸೇರಲು ಬಯಸಿದ್ದರು : ಮೋದಿ**
ನಿಜಾಮಾಬಾದ್ : 2020ರಲ್ಲಿ ತೆಲಂಗಾಣದ ಮುಖ್ಯಮಂತ್ರಿ ಕೆ.ಸಿ. ಚಂದ್ರಶೇಖರ ರಾವ್ ಎನ್.ಡಿ.ಎ. ಸೇರಲು ಬಯಸಿದ್ದರು. ಆದರೆ, ಅವರ ಕೃತ್ಯಗಳನ್ನು ನೋಡಿ, ಇದಕ್ಕೆ ಅನುಮತಿ ನೀಡಿರಲಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ನಮ್ಮ ಕಾರ್ಯಾಚರಣೆ ಯೋಜನೆಗಳು ಪರಿವರ್ತನಶೀಲ : ವಾಯುಪಡೆ ಮುಖ್ಯಸ್ಥ**
ನವದೆಹಲಿ : ಚೀನಾ ವಾಸ್ತವಿಕ ಗಡಿ ರೇಖೆಯ ಬಳಿ ವಾಯುಪಡೆ ಹೆಚ್ಚಿಸಿಕೊಳ್ಳುತ್ತಿದೆ ಎಂಬ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ವಾಯುಪಡೆ ಮುಖ್ಯಸ್ಥ ವಿ.ಆರ್. ಚೌಧರಿ, ನಮ್ಮ ಕಾರ್ಯಾಚರಣೆ ಯೋಜನೆಗಳು ಪರಿವರ್ತನಶೀಲವಾಗಿವೆ ಎಂದಿದ್ದಾರೆ. ಶಕ್ತಿಯಿಂದ ಎದುರಾಳಿಯನ್ನು ಎದುರಿಸಲಾಗದ ಕಡೆಗಳಲ್ಲಿ ವಾಯುಪಡೆಯ ಸಿಬ್ಬಂದಿಗೆ ಉತ್ತಮ ತರಬೇತಿ ಹಾಗೂ ತಂತ್ರಗಾರಿಕೆ ಕಲಿಸಿ ಸಜ್ಜುಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

**ಕೇಂದ್ರ ಸರ್ಕಾರ ಬಾಕಿ ನೀಡದಿದ್ದರೆ ಜನಪ್ರತಿನಿಧಿಗಳಿಂದಲೇ ಪಾವತಿ : ಟಿಎಂಸಿ**
ನವದೆಹಲಿ : ಕೇಂದ್ರ ಸರ್ಕಾರ ಪಶ್ಚಿಮ ಬಂಗಾಳದ ಉದ್ಯೋಗ ಖಾತ್ರಿಗೆ ಹಣ ಬಾಕಿ ಉಳಿಸಿಕೊಂಡಿದೆ. ಈ ಹಣವನ್ನು ಬಿಡುಗಡೆ ಮಾಡದೇ ಹೋದರೆ ತೃಣಮೂಲ ಕಾಂಗ್ರೆಸ್ ಜನಪ್ರತಿನಿಧಿಗಳ ವೇತನದಿಂದ ಖಾತ್ರಿ ಹಣ ನೀಡಲಾಗುವುದು ಎಂದು ಪಕ್ಷ ತಿಳಿಸಿದೆ. ಖಾತ್ರಿ ಹಣ ಬಿಡುಗಡೆಗೆ ಒತ್ತಾಯಿಸಿ ಪಕ್ಷದ ನಾಯಕರು ಎರಡು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

**ಕಾರ್ಯಾಚರಣೆಯಲ್ಲಿ ಇಬ್ಬರು ಸೈನಿಕರಿಗೆ ಗಾಯ**
ಜಮ್ಮು : ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಉಗ್ರರ ವಿರುದ್ಧ ನಡೆಸಲಾದ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿಯಲ್ಲಿ ಇಬ್ಬರು ಸೈನಿಕರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಭಾರತ – ಬಾಂಗ್ಲಾ ಪಡೆಗಳ ಜಂಟಿ ಕಸರತ್ತು**
ನವದೆಹಲಿ : ಮೇಘಾಲಯದಲ್ಲಿ ಭಾರತ ಹಾಗೂ ಬಾಂಗ್ಲಾದೇಶದ ಪಡೆಗಳು ಎರಡು ದಿನಗಳ ಸೈನಿಕ ಕಸರತ್ತು ಆರಂಭಿಸಿವೆ. ಕಾರ್ಯಾಚರಣೆಗಳ ವೇಳೆ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಈ ಕಸರತ್ತು ನಡೆಸಲಾಗುತ್ತಿದೆ.

**ವಾಯುಪಡೆಯಿಂದ 97 ತೇಜಸ್ ವಿಮಾನ ಖರೀದಿ**
ನವದೆಹಲಿ : ವಾಯುಪಡೆಯು 1.15 ಲಕ್ಷ ಕೋಟಿ ರೂ.ಗಳ ವೆಚ್ಚದಲ್ಲಿ 97 ತೇಜಸ್ ಮಾರ್ಕ್ - 1ಎ ವಿಮಾನಗಳನ್ನು ಹೆಚ್ಚುವರಿಯಾಗಿ ಖರೀದಿಸಲಿದೆ. ಇದರ ಜೊತೆಗೆ 84 ಸುಖೋಯ್ -30ಎಂಕೆಐ ವಿಮಾನಗಳನ್ನು 60 ಸಾವಿರ ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸ ಲಾಗುವುದು ಎಂದು ವಾಯುಪಡೆಯ ಮುಖ್ಯಸ್ಥ ವಿ.ಆರ್. ಚೌಧರಿ ತಿಳಿಸಿದ್ದಾರೆ.

**ನೇಪಾಳದಲ್ಲಿ 4 ಭೂಕಂಪ**
ನವದೆಹಲಿ : ನೇಪಾಳದಲ್ಲಿ ಒಂದರ ಹಿಂದೊಂದರಂತೆ ನಾಲ್ಕು ಭೂಕಂಪಗಳು ಸಂಭವಿಸಿವೆ. ಈ ಪೈಕಿ ಒಂದು ರಿಕ್ಟರ್ ಮಾಪಕದಲ್ಲಿ 6.2ರಷ್ಟಿತ್ತು. ದೆಹಲಿ ಸೇರಿದಂತೆ ಉತ್ತರ ಭಾರತದ ಹಲವೆಡೆ ನೆಲ ನಡುಗಿದ ಅನುಭವವಾಗಿದೆ.

**ಬಿಹಾರದ ಜಾತಿ ಗಣತಿ ತಿರುಚಿದ ಆರೋಪ**
ನವದೆಹಲಿ : ಬಿಹಾರ ಸರ್ಕಾರ ಪ್ರಕಟಿಸಿರುವ ಜಾತಿ ಗಣತಿಯನ್ನು ತಳ್ಳಿ ಹಾಕಿರುವ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್ ಪಾಸ್ವಾನ್) ನಾಯಕ ಚಿರಾಗ್ ಪಾಸ್ವಾನ್, ಇದು ರಾಜಕೀಯ ಸಂಚು. ಅವರು ಕೆಲ ಜಾತಿಯವರ ಜನಸಂಖ್ಯೆಯನ್ನು ಉತ್ಪ್ರೇಕ್ಷಿಸಿದ್ದರೆ, ಇನ್ನು ಕೆಲ ಜಾತಿಗಳ ಸಂಖ್ಯೆ ಕಡಿಮೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

**ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗೆ ಮಾರ್ಗಸೂಚಿ**
ನವದೆಹಲಿ : ಶಾಲಾ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗಾಗಿ ಕೇಂದ್ರ ಶಿಕ್ಷಣ ಸಚಿವಾಲಯ ಮಾರ್ಗಸೂಚಿಯ ಕರಡನ್ನು ಪ್ರಕಟಿಸಿದೆ. ವಿದ್ಯಾರ್ಥಿಗಳಿಗೆ ನೆರವಾಗಲು ಕ್ಷೇಮ ತಂಡಗಳನ್ನು ರಚಿಸಬೇಕು, ಸಮಸ್ಯೆಯ ಲಕ್ಷಣ ತೋರುವ ವಿದ್ಯಾರ್ಥಿಗಳ ಮೇಲೆ ನಿಗಾ ಇಡಬೇಕು ಹಾಗೂ ಅವರ ಬೆಂಬಲಕ್ಕೆ ವ್ಯವಸ್ಥೆ ರೂಪಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

**ಬಾಲ್ಯ ವಿವಾಹ ತಡೆಗಾಗಿ ಸಾವಿರಕ್ಕೂ ಹೆಚ್ಚು ಜನರ ಬಂಧನ**
ಗುವಾಹತಿ : ಅಸ್ಸಾಂನಲ್ಲಿ ಬಾಲ್ಯ ವಿವಾಹದ ವಿರುದ್ಧ ಎರಡನೇ ಹಂತದ ಕಾರ್ಯಾಚರಣೆ ನಡೆಸಲಾಗಿದ್ದು, ಈ ವೇಳೆ ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದ್ದಾರೆ.

# ಪರಸ್ಪರ ಗೌರವವನ್ನು ಕೊಡುವುದೇ ಅತ್ಯಂತ ಶ್ರೇಷ್ಠ ಧರ್ಮ

### ಹರಿಹರ ಜಮಾಅತೆ ವತಿಯಿಂದ ಜರುಗಿದ ವಿಚಾರಗೋಷ್ಠಿಯಲ್ಲಿ ವಚನಾನಂದ ಸ್ವಾಮೀಜಿ, ಮುಹಮದ್ ಕುಂಞ್



ಹರಿಹರ, ಅ.3- ನಾವು ಮತ್ತೊಬ್ಬರಿಗೆ ಪರಸ್ಪರ ಗೌರವವನ್ನು ಕೊಡುವುದೇ ಅತ್ಯಂತ ಶ್ರೇಷ್ಠವಾದ ಧರ್ಮವಾಗಿದೆ ಎಂದು ಪಂಚಮ ಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಮರಿಯಾ ನಿವಾಸ ಸಭಾಂಗಣದಲ್ಲಿ ರಾಬಿತಾ ಎ ಮಿಲ್ಲತ್ ಕಮಿಟಿ ಮತ್ತು ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಇಂದು ನಡೆದ ಪ್ರವಾದಿ ಮುಹಮ್ಮದ್ ಸೀರತ್ ಅವರ ಅಭಿಯಾನದ ಪ್ರಯುಕ್ತ ನಡೆದ ವಿಚಾರಗೋಷ್ಠಿಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮುಸ್ಲಿಂ ಸಮುದಾಯದವರು ತಾವು ದಿನನಿತ್ಯ ಮಾಡುವ ಪ್ರಾರ್ಥನೆಯನ್ನು ಶಿಸ್ತು, ಬದ್ಧತೆಯಿಂದ ಮಾಡಿದಾಗ ಆರೋಗ್ಯವಂತ ಜೀವನವನ್ನು ನಡೆಸಬಹುದು. ಕಾರಣ, ಅದರಲ್ಲಿ ಸಾಕಷ್ಟು ಯೋಗಕ್ಕೆ ಸಂಬಂಧಿಸಿದ ಅಂಶಗಳು ಅಡಕವಾಗಿವೆ. ವ್ಯಕ್ತಿಯಲ್ಲಿ ಘನತೆ, ಸಮಾಜದಲ್ಲಿ ಸಮತೆ, ರಾಷ್ಟ್ರದಲ್ಲಿ ಭಾವೈಕ್ಯತೆಯ ಭಾವನೆಗಳ ಅವಶ್ಯಕತೆಯಿದೆ. ಎಲ್ಲಾ ವರ್ಗದವರು ನಾವೆಲ್ಲರೂ ಒಂದೇ ಎಂಬ ಭಾವನೆಗಳನ್ನು ಬೆಳೆಸಿಕೊಂಡು ಹೋದಾಗ ಸುಂದರವಾದ ಭಾರತ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕದ ರಾಜ್ಯ ಕಾರ್ಯದರ್ಶಿ ಮುಹಮ್ಮದ್ ಕುಂಞ್ ಮಾತನಾಡಿ, ನನ್ನ ಧರ್ಮದವರು ಮತ್ತು ನನ್ನವರು ಎಂಬ ಕಾರಣಕ್ಕಾಗಿ ಒಬ್ಬ ವ್ಯಕ್ತಿ ಮಾಡುವ ಅನ್ಯಾಯವನ್ನು, ಅಧರ್ಮವನ್ನು ಹಾಗೂ ಅನೈತಿಕತೆಯನ್ನು ಬೆಂಬಲಿಸುವುದು ಧರ್ಮವಲ್ಲ ಎಂದು ಹೇಳಿದರು.

ಇಂದು ಸಮಾಜದಲ್ಲಿ ನನ್ನವ ಮತ್ತು ನನ್ನವರು ಎಂಬುದು ಬಹಳಷ್ಟು ಮಾರಕವಾಗಿ ಬೆಳೆಯುತ್ತಾ ಸಾಗಿದೆ. ಇದು ಹೋಗಿ ನಾವೆಲ್ಲರೂ ಒಂದೇ ಎಂಬ ಸಂದೇಶಗಳನ್ನು ಗಟ್ಟಿಯಾಗಿ ಹೇಳಿಕೊಡುವ ಅಗತ್ಯವಿದೆ. ಒಬ್ಬ ಮನುಷ್ಯನ ಬಗ್ಗೆ ಒಳ್ಳೆಯ ಭಾವನೆಗಳನ್ನು ಇಟ್ಟುಕೊಳ್ಳುವುದು ಅತ್ಯಂತ ಶ್ರೇಷ್ಠ ಆರಾಧನೆಯಾಗಿದೆ. ಈ ಜಗತ್ತಿನಲ್ಲಿ ಅನೇಕ ದಾರ್ಶನಿಕರು, ಸಂತರು, ಪ್ರವಾದಿ ಮುಹಮ್ಮದ್‌ರು ಋಷಿ ಮುನಿಗಳು, ಬಂದಿದ್ದಾರೆ. ಆದರೆ ಅವರು ಯಾರೂ ನಮ್ಮನ್ನು ಪೂಜಿಸಿ ಎಂದು ಜಗತ್ತಿಗೆ ಬಂದವರಲ್ಲ, ಅವರು ನಮ್ಮನು ಅನುಸರಿಸಿ ಎಂದು ಹೇಳಿದರು. ಆದರೆ, ದುರದೃಷ್ಟ ಎಂದರೆ ನಾವುಗಳು ಅವರನ್ನು ಅನುಸರಿಸದೆ, ಪೂಜಿಸುತ್ತಿದ್ದೇವೆ. ಬಸವಣ್ಣನವರು ಮತ್ತು ಸ್ವಾಮಿ ವಿವೇಕಾನಂದರು ಸೀಮಿತ ಸಮಾಜದ ವ್ಯಕ್ತಿಗಳಲ್ಲ, ಸಮಸ್ತ ಮಾನವ ಕುಲದ ಆಸ್ತಿಯಾಗಿದ್ದಾರೆ. ಮಹಾನ್ ಪುರುಷರನ್ನು ವಿಭಜನೆ ಮಾಡಿ ಅವರು ನಮ್ಮವರು ಇವರು ನಮ್ಮವರು ಎಂದು ವಿಭಜನೆ ಮಾಡುತ್ತಾ ಅಷ್ಟೇ ಅಲ್ಲದೇ ದೇವರನ್ನು ವಿಭಜಿಸುತ್ತಿದ್ದೇವೆ. ಇದರ ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಹೊರಗಿನಿಂದ ನಾವೆಲ್ಲರೂ ಚೆನ್ನಾಗಿ, ಸಂತೋಷದಿಂದ ಇದ್ದರೂ ಒಳಗೆ ಅಶಾಂತಿ, ಅಸಹಕಾರ, ಹಗೆತನ, ದ್ವೇಷ, ಒತ್ತಡ ಹೀಗೆ ನೂರಾರು ಮಾನಸಿಕ ರೋಗಿಗಳಾಗಿದ್ದೇವೆ. ಇಂತಹ ಸಮಾಜಕ್ಕೆ ಬೆಳಕು ನೀಡಬೇಕಾದರೆ ಮಹಾನ್ ಪುರುಷರು, ದಾರ್ಶನಿಕರು, ಋಷಿ ಮುನಿಗಳು ಪ್ರವಾದಿಯವರು ಕೊಟ್ಟಿರುವ ಸಂದೇಶಗಳನ್ನು ಸರಿಯಾದ ರೀತಿಯಲ್ಲಿ ಬೋಧಿಸಿದಾಗ ಮಾತ್ರ ಮನುಷ್ಯ ನೆಮ್ಮದಿ ಜೀವನ ನಡೆಸುವುದಕ್ಕೆ ಮತ್ತು ಆರೋಗ್ಯಪೂರ್ಣ ಸಮಾಜವನ್ನು ಕಟ್ಟಲು ಸಾಧ್ಯವಿದೆ ಎಂದರು.

ಕಟೌಟ್ ಕಟ್ಟುವುದು, ಮೆರವಣಿಗೆ ಮಾಡುವುದು, ಗಲಾಟೆ ಮಾಡುವುದು ಧರ್ಮವಾಗಿ ಮಾರ್ಪಟ್ಟಿದೆ. ಧರ್ಮ ಎಂದರೆ ಮನಸ್ಸನ್ನು ಸಂಸ್ಕರಿಸಿ, ಅಂತರಂಗವನ್ನು ಸ್ವಚ್ಛಗೊಳಿಸಿ ಮನುಷ್ಯತ್ವವನ್ನು ಉದ್ದೀಪನಗೊಳಿಸುವುದಾಗಿದೆ. ಆಗಾಗಿ ಧರ್ಮದ ಆಚರಣೆ ಬಗ್ಗೆ ತಿಳಿಸುವ ಕೆಲಸವಾಗಬೇಕಾಗಿದೆ. ಇಂದು ಸಮಾಜದಲ್ಲಿ ಮಾದಕ ವಸ್ತುಗಳ ಬಳಕೆ ಮತ್ತು ಮದ್ಯಪಾನ ಹೆಚ್ಚಾಗಿ ಶೇ. 80 ರಷ್ಟು ಕಲಹಗಳು ನಡೆಯುವುದಕ್ಕೆ ದಾರಿಯಾಗಿದೆ. ಇದರಿಂದ ಮನುಷ್ಯ ತನ್ನ ನೆಮ್ಮದಿ ಜೊತೆಗೆ ಆರ್ಥಿಕವಾಗಿ, ನೈತಿಕವಾಗಿ, ಶಾರೀರಕವಾಗಿ ನಾಶವಾಗುತ್ತಿದ್ದು, ಅದನ್ನು ಸರಿ ದಾರಿಗೆ ತರುವ ಕೆಲಸವಾಗಬೇಕಾದರೆ ದಾರ್ಶನಿಕರ ಪ್ರವಾದಿ ಮುಹಮ್ಮದ್ ರವರ ಸಂದೇಶಗಳಿಂದ ಮಾತ್ರ ಸಾಧ್ಯವಿದೆ ಎಂದು ಹೇಳಿದರು.

ಈ ವೇಳೆ ಶಾಸಕ ಬಿ.ಪಿ. ಹರೀಶ್, ಆರೋಗ್ಯ ಮಾತೆ ಚರ್ಚ್ ಫಾದರ್ ಜಾರ್ಜ್ ಕೆ.ವಿ., ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ಡಾ, ನಬಿಸಾಬ್ ಮಾತನಾಡಿದರು.

ಈ ವೇಳೆ 'ನನ್ನ ಅರಿವಿನ ಪ್ರವಾದಿ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎಂ. ನಾಗೇಂದ್ರಪ್ಪ, ಟಿ.ಜೆ. ಮುರುಗೇಶಪ್ಪ, ಪ್ರೊ ಎಸ್. ಎ. ಭಿಕ್ಷಾವರ್ತಿಮಠ್ , ಅಬ್ದುಲ್ ಲತೀಫ್, ಕೆ.ಕೆ. ಖುದ್ದೂಸ್, ಹೆಚ್.ಕೆ. ಕೊಟ್ರಪ್ಪ, ಎ. ರಿಯಾಜ್ ಅಹ್ಮದ್, ಮಹಮ್ಮದ್ ಫೈರೋಜ್, ರೆಹಮಾನ್ ಸಾಬ್, ಅತಾವುಲ್ಲಾ, ಎಂ. ಎಂ. ಪಾರೂಕ್, ಬಾಲರಾಜ್, ಪಿ.ಜೆ. ಮಹಾಂತೇಶ್, ಮನಸೂರ ಮದ್ದಿ, ಮುಜಾಮಿಲ್ಲ್ ಬಿಲ್ಲು, ಆಸೀಫ್ ಜುನೇದಿ, ಹಬೀಬ್ ಉಲ್ಲಾ, ಶಮೀರ್ ಅಲಾಂ, ಅಂಗಡಿ ಮಲ್ಲಿಕಾರ್ಜುನ, ಬಾಬಣ್ಣ, ಅಶ್ಫಾಕ್ ಅಹ್ಮದ್, ಡಾ ನಜೀಬ್ ಉಲ್ಲಾ ಇತರರು ಹಾಜರಿದ್ದರು.


# 6ರಂದು ಬೆಳ್ಳಿ ಇಟ್ಟಿಗೆ ಸಮರ್ಪಣಾ ಸಮಾರಂಭ

ದಾವಣಗೆರೆ, ಅ.3- ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯಕ್ಕಾಗಿ ಬೆಳ್ಳಿ ಇಟ್ಟಿಗೆ ಸಮರ್ಪಣಾ ಸಮಾರಂಭವನ್ನು ಇದೇ ದಿನಾಂಕ 6ರ ಶುಕ್ರವಾರ ನಗರದ ಶ್ರೀ ಅಭಿನವ ರೇಣುಕಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಭಾಷಣಕಾರರಾಗಿ ಮಾಜಿ ಸಚಿವ ಸಿ.ಟಿ. ರವಿ, ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಶಾಸಕ ಬಿ.ಪಿ. ಹರೀಶ್, ಹಿಂದೂ ಸಂಘಟನಾ ಪ್ರಮುಖ ಕೆ.ಬಿ. ಶಂಕರನಾರಾಯಣ್ ಆಗಮಿಸಲಿದ್ದಾರೆ.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡುವ ಸಲುವಾಗಿ ಜಾಗೃತಿ ಮೂಡಿಸಲು ಶ್ರೀರಾಮ ಜ್ಯೋತಿ ರಥಯಾತ್ರೆ 1990ರ ಅಕ್ಟೋಬರ್ 6ರಂದು ದಾವಣಗೆರೆಗೆ ಆಗಮಿಸಿತ್ತು. ರಥಯಾತ್ರೆ ಸ್ವಾಗತಿಸುವ ಸಂದರ್ಭದಲ್ಲಿ ನಡೆದ ಕೋಮುಗಲಭೆಯಲ್ಲಿ 8



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ

ಜನ ಹಿಂದೂ ಕಟ್ಟಾಳುಗಳು ಹುತಾತ್ಮರಾಗಿದ್ದರು. ಅವರ ಸ್ಮರಣಾರ್ಥ 15 ಕೆ.ಜಿ. ಬೆಳ್ಳಿ ಇಟ್ಟಿಗೆ ಸಮರ್ಪಿಸಲಾಗುತ್ತಿದೆ. ಕೋಮುಗಲಭೆಯಲ್ಲಿ ಹುತಾತ್ಮರಾದ 8 ಜನರ ಹೆಸರುಗಳನ್ನು ಬೆಳ್ಳಿ ಇಟ್ಟಿಗೆ ಮೇಲೆ ಬರೆಸಲಾಗಿದೆ ಎಂದು ಹೇಳಿದರು. ಹುತಾತ್ಮರಾದವರ ಹಾಗೂ ಗಾಯಗೊಂಡವರ ಕುಟುಂಬದ ಸದಸ್ಯರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ, ಗೌರವ ಸಮರ್ಪಣೆ ಮಾಡಲಾಗುವುದು ಎಂದರು.

ಕಳೆದ ಹತ್ತು ವರ್ಷಗಳಿಂದ ಕೋಮುಗಲಭೆ ಹಿನ್ನೆಲೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಉಚಿತವಾಗಿ ವಕಾಲತ್ತು ವಹಿಸಿ, ನಮಗೆ ನ್ಯಾಯ ದೊರಕಿಸಿಕೊಟ್ಟ ನಾಲ್ವರು ವಕೀಲರನ್ನೂ ಸಹ ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಜಾಧವ್ ಹೇಳಿದರು.

ಬಿಜೆಪಿ ಮುಖಂಡ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ಕುರಿತು ನೂರಾರು ವರ್ಷಗಳಿಂದ ಹಿಂದೂಗಳು ಕಾಣುತ್ತಿದ್ದ ಕನಸನ್ನು ಪ್ರಧಾನಿ ಮೋದಿ ನನಸು ಮಾಡಿದ್ದಾರೆ. ರಾಮ ಮಂದಿರ ನಿರ್ಮಾಣಕ್ಕಾಗಿ ಬೆಳ್ಳಿ ಇಟ್ಟಿಗೆ ಸಮರ್ಪಿಸುವ ಕಾರ್ಯಕ್ರಮ ದಾವಣಗೆರೆಗೆ ಕೀರ್ತಿ ತರುವಂತಹದ್ದು ಎಂದರು.

ಮುಖಂಡರುಗಳಾದ ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಟಿಂಕರ್ ಮಂಜಣ್ಣ, ರಮೇಶ್ ನಾಯ್ಕ, ಕಿಶೋರ್ ಕುಮಾರ್, ಬೇತೂರು ಬಸಣ್ಣ, ರಾಜು ನೀಲಗುಂದ, ಪಿ.ಸಿ. ಶ್ರೀನಿವಾಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

### ಇಂದು ಬೈಕ್ ರ್ಯಾಲಿ

**ಬೆಳ್ಳಿ ಇಟ್ಟಿಗೆ ಸಮರ್ಪಣಾ ಸಮಾರಂಭದ ಅಂಗವಾಗಿ ಇಂದು ಬೈಕ್ ರ್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಯಶವಂತರಾವ್ ಜಾಧವ್ ತಿಳಿಸಿದ್ದಾರೆ.**

**ವೆಂಕಟೇಶ್ವರ ವೃತ್ತದಿಂದ ಬೆಳಿಗ್ಗೆ 11ಗಂಟೆಗೆ ಆರಂಭವಾಗುವ ರ್ಯಾಲಿಯು ಬಂಬೂಬಜಾರ್, ಕೆ.ಆರ್. ರಸ್ತೆ, ಮಂಡಿಪೇಟೆ, ಗಡಿಯಾರ ಕಂಬ, ಕಾಳಿಕಾದೇವಿ ರಸ್ತೆ, ಹಗೇದಿಬ್ಬ ವೃತ್ತ, ದುರ್ಗಾಂಬಿಕಾ ದೇವಸ್ಥಾನ, ಹೊಂಡದ ವೃತ್ತ, ಅರುಣ ಸರ್ಕಲ್ ಮೂಲಕ ರೇಣುಕಾ ಮಂದಿರ ತಲುಪಲಿದೆ.**

# ಸಮುದಾಯಕ್ಕೆ ಅನ್ಯಾಯವಾಗಿಲ್ಲ

(1ನೇ ಪುಟದಿಂದ) ಪ್ರಶಾಂತ್ ಇದ್ದಾರೆ ಎಂದರು. ನಾವು ಅಧಿಕಾರಿಗಳಲ್ಲಿ ಜಾತಿ ನೋಡಬಾರದು. ಇದೇ ರೀತಿ ಮಾತನಾಡಿಕೊಂಡು ಹೋದರೆ, ಅನರ್ಹರೆಲ್ಲರೂ ಮಾತನಾಡುತ್ತಾರೆ. ಶಾಮನೂರು ಬೆಂಬಲಿಸಿ ಯಡಿಯೂರಪ್ಪ ಅವರು ಮಾತನಾಡಿರುವುದು ತಪ್ಪೇ ಎಂದರು.

ಸಿದ್ದರಾಮಯ್ಯ ಲಿಂಗಾಯತ ವಿರೋಧಿ ಅಲ್ಲ. ಅವರು ಆ ಸಮುದಾಯಕ್ಕೆ ಅನ್ಯಾಯ ಮಾಡಿಲ್ಲ. ಅವರು ಬಸವ ತತ್ವ ಪರಿಪಾಲಕರು ಎಂದು ಸಮರ್ಥಿಸಿಕೊಂಡರು. ಇವರ ನೇತೃತ್ವದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಾಲ್ಕು ಗ್ಯಾರಂಟಿ ಕಾರ್ಯಕ್ರಮಗಳು ಜಾರಿಯಾಗಿವೆ. ನಾನು ಪತ್ರ ಬರೆದ ನಂತರ ಶಾಸಕರ ಸಮಸ್ಯೆಗಳನ್ನು ಆಲಿಸಿ ಅವಕ್ಕೂ ಪರಿಹಾರ ಕಂಡುಹಿಡಿಯುತ್ತಿದ್ದಾರೆ.

ಉಪ ಮುಖ್ಯಮಂತ್ರಿ ವಿಚಾರ ಚರ್ಚೆಗೆ ಬಂದು ಆರೋಗ್ಯಕರವಾಗಿಯೇ ಚರ್ಚೆ ನಡೆದವು. ನಮ್ಮ ಸಮಾಜದವರಿಗೆ ಸಂಪುಟದಲ್ಲಿ 7 ಸ್ಥಾನಗಳು ದೊರೆತಿವೆ. ಸಂಪುಟ ರಚನೆ ಮಾಡುವಾಗ ಪ್ರಾದೇಶಿಕ ಹಾಗೂ ಜಾತಿ ಆಧಾರಿತ ಪರಿಗಣನೆ ಬೇರೆ. ಆದರೆ, ಜಾತಿ ಆಧಾರದ ಮೇಲೆ ಹುದ್ದೆ ನೀಡಲಾಗದು ಎಂದವರು ಹೇಳಿದರು.

ಅಧಿಕಾರಿಗಳ ವಿಚಾರದಲ್ಲಿ ಜಾತಿ ವಿಚಾರ ಪ್ರಸ್ತಾಪ ಮಾಡಿದರೆ ಅವರ ನೈತಿಕ ಸ್ಥೈರ್ಯ ಕುಗ್ಗಲಿದೆ. ಆಡಳಿತದ ಮೇಲೂ ಪರಿಣಾಮ ಬೀರಲಿದೆ.

ಕಾಂತರಾಜು ಅವರು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಸಿದ್ಧಪಡಿಸಲಾದ ಜಾತಿ ಗಣತಿಯನ್ನು ಸರ್ಕಾರ ಸ್ವೀಕರಿಸಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ವರದಿಯನ್ನು ಸ್ವೀಕರಿಸಿ ಬಿಡುಗಡೆ ಮಾಡಬೇಕು ಎಂದು ಅವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಬಿಹಾರದಲ್ಲಿ ಜಾತಿ ಗಣತಿ ಬಿಡುಗಡೆ ಮಾಡಲಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಬಿಡುಗಡೆ ಮಾಡಬೇಕು. ಯಾವ ಸಮಾಜದವರು ಎಷ್ಟಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಹೇಳಿದರು.

# ಗೂಗಲ್ ಮ್ಯಾಪ್ ವಿವರದ ಷರತ್ತು

(1ನೇ ಪುಟದಿಂದ) 8ರಂದು ಜಾಮೀನು ನೀಡುವಾಗ ಹಲವು ಷರತ್ತುಗಳನ್ನು ವಿಧಿಸಿತ್ತು. ಇದರಲ್ಲಿ ತಾನಿರುವ ಸ್ಥಳದ ಮಾಹಿತಿಯನ್ನು ಗೂಗಲ್ ಮ್ಯಾಪ್ ಮೂಲಕ ತನಿಖಾಧಿಕಾರಿಗಳಿಗೆ ತಿಳಿಸಬೇಕು ಎಂಬುದೂ ಸೇರಿತ್ತು.

# ಸ.ಪ್ರ.ದ.ಕಾಲೇಜಿನಲ್ಲಿ ಶ್ರಮದಾನದೊಂದಿಗೆ ಗಾಂಧಿ ಜಯಂತಿ

ದಾವಣಗೆರೆ, ಅ. 3 - ಮಹಾತ್ಮಾ ಗಾಂಧೀಜಿ ಜನ್ಮ ದಿನದ ನೆನಪಿಗಾಗಿ ಮಾನ್ಯ ಪ್ರಧಾನ ಮಂತ್ರಿಯವರ ಆಶಯದಂತೆ ಸ್ವಚ್ಛ ಭಾರತ ಅಭಿಯಾನ -2023 ನ್ನು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಶ್ರಮದಾನದ ಮೂಲಕ ಆಚರಿಸಿದರು.

ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶನದ ಅನುಸಾರ ಈ ಕಾರ್ಯಕ್ರಮದಲ್ಲಿ ಕಾಲೇಜಿನ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಮೊದಲು ಸ್ವಚ್ಛ ಭಾರತ ಅಭಿಯಾನದ ಧ್ಯೇಯ ವಾಕ್ಯ 'ಕಸಮುಕ್ತ ಭಾರತ -2023' ರ ಪ್ರಮಾಣ ವಚನದ ಪ್ರತಿಜ್ಞೆ ಸ್ವೀಕರಿಸಿ ಕಾಲೇಜಿನ ಆವರಣ ಸ್ವಚ್ಛಗೊಳಿಸಿದರು.

ನಂತರ ವಿದ್ಯಾರ್ಥಿಗಳು ಸ್ವಚ್ಛ ಭಾರತದ ಘೋಷಣೆಗಳನ್ನು ಕೂಗುತ್ತಾ ಸಾಲಾಗಿ ನಡೆದುಕೊಂಡು ಜಿಲ್ಲಾ ಕ್ರೀಡಾಂಗಣ ತಲುಪಿ



ಕ್ರೀಡಾಂಗಣದಲ್ಲಿ ಬಿದ್ದಿದ್ದ ಕಸಕಡ್ಡಿಗಳನ್ನು ಆರಿಸಿ ಸ್ವಚ್ಛಗೊಳಿಸಿದರು.

ವಾರಕ್ಕೆ ಎರಡು ಗಂಟೆ ಮತ್ತು ವರ್ಷಕ್ಕೆ 100 ಗಂಟೆ ಸ್ವಚ್ಛತೆಗಾಗಿ ಮೀಸಲಿಡುವ ಮೂಲಕ ಕಸಮುಕ್ತ ಭಾರತದ ಕನಸನ್ನು ಸಾಧಿಸುವುದಾಗಿ ಪಣತೊಟ್ಟ ವಿದ್ಯಾರ್ಥಿಗಳು ಶ್ರಮದಾನದಲ್ಲಿ ಲವಲವಿಕೆಯಿಂದ ಪಾಲ್ಗೊಂಡಿದ್ದರು.

ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ಪ್ರೊ. ಜಿ. ಆರ್. ನಟರಾಜ್ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಪ್ರಾಚಾರ್ಯ ದಾದಾಪೀರ್ ನವಿಲೇಹಾಳ್ ವಿದ್ಯಾರ್ಥಿಗಳಿಗೆ ಕಸಮುಕ್ತ ಭಾರತದ ಪ್ರಮಾಣ ವಚನ ಬೋಧಿಸಿದರು.

ಎನ್ನೆಸ್ಸೆಸ್ ಅಧಿಕಾರಿ ಪ್ರೊ. ಗುರುದೇವ್, ಸ್ಕೌಟ್ಸ್ ಮತ್ತು ಗೈಡ್ಸ್ ಸಂಚಾಲಕ ಡಾ. ಕರಿಬಸಪ್ಪ, ದೈಹಿಕ ಶಿಕ್ಷಣ ನಿರ್ದೇಶಕರೂ, ಎನ್‌ಸಿಸಿ ಅಧಿಕಾರಿಗಳೂ ಆದ ಡಾ. ಎಂ. ಆರ್. ರೇಖಾ, ಪ್ರಾಧ್ಯಾಪಕ ಬಿ.ಸಿ. ತಹಶೀಲ್ದಾರ್, ಕೆ.ವಿ. ಬಸವರಾಜ್, ಕೆ.ಎಂ. ರುದ್ರಪ್ಪ, ಎಸ್.ಆರ್. ಅಂಜನಪ್ಪ, ಟಿ. ಮಂಜಣ್ಣ, ಗುರುರಾಜ್, ಯು. ಬಸವರಾಜ್, ಚನ್ನಬಸಪ್ಪ, ಜೆ.ಎಂ. ಮಂಜುನಾಥ್, ಶಂಭುಲಿಂಗಪ್ಪ, ಟಿ. ನಿಂಗಪ್ಪ, ಸವಿತಾ ಮೇಗಳಮನಿ, ಲೋಲಾಕ್ಷಿ, ಗ್ರಂಥಪಾಲಕರಾದ ರೂಪಶ್ರೀ, ಗಿರೀಶ್ ಉಪಸ್ಥಿತರಿದ್ದರು.

# ಹಕ್ಕುಗಳೆಲ್ಲಾ ಹಿಂದೂಗಳಿಗೇ ಸಿಗಬೇಕೇ?

(1ನೇ ಪುಟದಿಂದ) ಹಕ್ಕಿರಬೇಕು. ಬಡವರ ಕಲ್ಯಾಣವೇ ನನ್ನ ಗುರಿ ಎಂದಿದ್ದಾರೆ. ದೇಶದ ಸಂಪನ್ಮೂಲದ ಮೇಲೆ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕಿದೆ ಎಂದು ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರು ಹೇಳಿದ್ದರು. ಈಗ ಕಾಂಗ್ರೆಸ್ ಪಕ್ಷ ಜನಸಂಖ್ಯೆ ಆಧಾರದ ಮೇಲೆ ಹಕ್ಕಿನ ಪಾಲು ನಿರ್ಧರಿಸುವುದಾಗಿ ಹೇಳುತ್ತಿದೆ. ಅವರು ಮುಸ್ಲಿಮರ ಹಕ್ಕು ಕಡಿಮೆ ಮಾಡಲು ಬಯಸಿ ದ್ದಾರೆಯೇ? ಎಂದು ಮೋದಿ ಪ್ರಶ್ನಿಸಿದ್ದಾರೆ.

ಹಿಂದೂಗಳ ಜನಸಂಖ್ಯೆ ಹೆಚ್ಚಾಗಿದೆ. ಹಿಂದೂಗಳೇ ಎಲ್ಲಾ ಹಕ್ಕುಗಳನ್ನು ಪಡೆಯ ಬೇಕೇ? ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರನ್ನು ತೆಗೆದು ಹಾಕಲು ಬಯಸಿದೆಯೇ? ಎಂದವರು ಪ್ರಶ್ನಿಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಅಲ್ಲಿರುವ ಜನರು ನಡೆಸುತ್ತಿಲ್ಲ. ದೊಡ್ಡ ಕಾಂಗ್ರೆಸ್ ನಾಯಕರು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ದೇಶ ವಿರೋಧಿ ಶಕ್ತಿಗಳು ತೆರೆಯ ಹಿಂದಿದ್ದು, ಅವರು ಕಾಂಗ್ರೆಸ್ ನಡೆಸುತ್ತಿದ್ದಾರೆ ಎಂದು ಮೋದಿ ಆರೋಪಿಸಿದ್ದಾರೆ.

# ನಮ್ಮ ಕ್ಲಿನಿಕ್‌ನ ಕಾರ್ಯನಿರ್ವಹಣೆ, ಸಮಯದಲ್ಲಿ ಬದಲಾವಣೆ

ದಾವಣಗೆರೆ, ಅ. 3 - ಆವರಗೆರೆ ಗ್ರಾಮದಲ್ಲಿರುವ ನಮ್ಮ ಕ್ಲಿನಿಕ್ ಪ್ರತಿದಿನ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ರವರೆಗೆ ಹಾಗೂ ಸಂಜೆ 4 ರಿಂದ 8 ರವರೆಗೆ ಕಾರ್ಯ ನಿರ್ವಹಿಸಲಿದೆ. ಬದಲಾದ ಸಮಯದಲ್ಲಿ ಸಾರ್ವಜನಿಕರು ಸೇವೆ ಪಡೆಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್ ಷಣ್ಮುಖಪ್ಪ ತಿಳಿಸಿದ್ದಾರೆ.


# ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಕೊಟ್ಟ ಮಾಹಿತಿಯ ಅಧಿಕಾರದ ಮೇಲೆ ಕೊಡುವ ಸಾರ್ವಜನಿಕ ನೋಟಿಸ್ ಏನೆಂದರೆ ನಮ್ಮ ಕಕ್ಷಿದಾರರು ದಾವಣಗೆರೆ ತಾಲ್ಲೂಕು ದಾವಣಗೆರೆ ಸಬ್ ರಿಜಿಸ್ಟ್ರಾರ್, ವ್ಯಾಪ್ತಿಗೆ ಒಳಪಟ್ಟ ಕಸಬಾ ಹೋಬಳಿ ಕುಂದುವಾಡ ಗ್ರಾಮದ ಈ ಕೆಳಕಂಡ ರಿ.ಸ.ನಂಬರ್ ಜಮೀನನ್ನು ಕೆಳಕಾಣಿಸಿದ ಪಟ್ಟಿಯಲ್ಲಿ ತೋರಿಸಲ್ಪಟ್ಟ ಮಾಲೀಕರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

| ಕ್ರ.ಸಂ. | ಮಾಲೀಕರ ಹೆಸರು | ರಿ.ಸ. ನಂ. | ಎಕರೆ - ಗುಂಟೆ |
|---|---|---|---|
| 1 | ಬಸವರಾಜಪ್ಪ ಬಿನ್ ದೇವಪ್ಪ | 62/2A | 01-20 |
| 2 | ಗುಡ್ಡಪ್ಪ ಬಿನ್ ದೇವಪ್ಪ | 62/2C | 01-00 |
| 3 | ಬಸವರಾಜಪ್ಪ ಬಿನ್ ಮಡಿವಾಳರ ಹನುಮಂತಪ್ಪ | 62/2B2 | 00-30 |
| 4 | ಶ್ರೀಮತಿ ಮಲ್ಲಮ್ಮ ಕೋಂ ಬಸಪ್ಪ | 62/2C | 00-20 |
| 5 | ಶ್ರೀಮತಿ ರೇವಮ್ಮ ಹೆಚ್. ರಾಮಪ್ಪ ಮತ್ತು ಮಕ್ಕಳು | 62/2B1 | 00-30 |
| 6 | ಶೀಲಮ್ಮ ಕೋಂ ದ್ಯಾವಪ್ಪ @ ದೇವಪ್ಪ | 62/2D | 00-21 |

ಸದರಿ ಮೇಲ್ಕಾಣಿಸಿದ ಸೊತ್ತುಗಳ ಖರೀದಿ ವ್ಯವಹಾರಕ್ಕೆ ಯಾರಾದರೂ ಯಾವುದೇ ರೀತಿ ತಂಟೆ ತಕರಾರು, ಹಕ್ಕು, ಹಿತಾಸಕ್ತಿ, ಸಂಬಂಧ ಮತ್ತು ಯಾವುದೇ ಜೀವನಾಂಶದ ಹಕ್ಕಿಗೆ ಅಥವಾ ಯಾವುದೇ ರೀತಿ ಬ್ಯಾಂಕ್ ಹಾಗೂ ಇತರೆ ಖಾಸಗಿ ವ್ಯಕ್ತಿಗಳಲ್ಲಿ ಅಡಮಾನ ಅಥವಾ ಆಧಾರ ಇದ್ದಲ್ಲಿ ಹಾಗೂ ಸದರಿ ಜಮೀನುಗಳ ಬಗ್ಗೆ ಯಾವುದೇ ರೀತಿಯ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯಕ್ಕೆ ಒಳಪಟ್ಟಿದ್ದಲ್ಲಿ ಈ ನೋಟಿಸ್ ಪ್ರಕಟಗೊಂಡ 7 ದಿನಗಳ ಒಳಗಾಗಿ ಈ ಕೆಳಕಾಣಿಸಿದ ವಿಳಾಸಕ್ಕೆ ಲಿಖಿತ ರೂಪದಲ್ಲಿ, ದಾಖಲೆ ಸಮೇತ ತಕರಾರುಗಳನ್ನು ಸಲ್ಲಿಸತಕ್ಕದ್ದು, ಪ್ರಕಟಗೊಂಡ 7 ದಿನಗಳ ನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ನಮ್ಮ ಕಕ್ಷಿದಾರರ ವ್ಯವಹಾರದ ಮೇಲೆ ಯಾವುದೇ ರೀತಿ ಲಾಗುವಾಗುವುದಿಲ್ಲ ಮತ್ತು ಸದರಿ ಸರ್ವೆ ನಂಬರ್ ಜಮೀನುಗಳ ಬಗ್ಗೆ ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಮಾಲೀಕರುಗಳಿಂದ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳುತ್ತಾರೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಸ್ಥಳ : ದಾವಣಗೆರೆ
ದಿನಾಂಕ : 01.10.2023

**ಶ್ರೀ ಹೆಚ್. ವಿ. ರಾಮದಾಸ್**
**ಶ್ರೀ ಕೆ.ಎಸ್. ವೆಂಕಟೇಶ್**, ವಕೀಲರು
#64, ಸದ್ಗುರು, 2ನೇ ಮುಖ್ಯ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
**ಮೊ : 98860 22144, 77609 41999**



# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

'ಪರಿಸರ ಭವನ', 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ ರಾಜ್ಯ, ಭಾರತ
"Parisara Bhavan", 1st to 5th Floor, # 49, Church Street, Bangalore - 560 001, Karnataka State, India

No. PCB/108/INFRAVEPH/2023 Date:

## ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಇವರು ಸಾರಥಿ ಗ್ರಾಮ ಮತ್ತು ಕರಲಹಳ್ಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ **'ಸಾರಥಿ ಕುರುಬರಹಳ್ಳಿ ಕೈಗಾರಿಕಾ ಪ್ರದೇಶ – ಎರಡನೇ ಹಂತ'**ವನ್ನು ಒಟ್ಟು 136.03 - ಹೆಕ್ಟೇರ್ (336 ಎಕರೆ 5 ಗುಂಟೆ) ಪ್ರದೇಶದಲ್ಲಿ ಅಭಿವೃದ್ಧಿಪಡಿಸುವ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006 ಮತ್ತು ತಿದ್ದುಪಡಿ 01-12-2009ರ ಪ್ರಕಾರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ Terms of Reference (TOR) ಫೈಲ್ ಸಂಖ್ಯೆ : 10/11/2023-IA.III (Proposal No. IA/MH/INFRAI/418016/2023 ದಿನಾಂಕ 09-05-2023ರಂತೆ ಮತ್ತು ಯೋಜನಾ ಪ್ರವರ್ತಕರ ಪತ್ರ ಸಂಖ್ಯೆ ದಿನಾಂಕ : 10-08-2023ರಲ್ಲಿನ ಕೋರಿಕೆಯನ್ನು ಹಾಗೂ ಮಂಡಳಿಯ ದಿನಾಂಕ 29-08-2023 ರ ಪತ್ರವನ್ನು ಪರಿಗಣಿಸಿ, ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ದಿನಾಂಕ: 04-11-2023 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸಮಯವನ್ನು ನಿಗದಿಪಡಿಸಿದ್ದು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕೆಳಕಾಣಿಸಿದ ವಿವರಗಳಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

| | | |
|---|---|---|
| 1. | ಸಂಸ್ಥೆಯ ಹೆಸರು ಮತ್ತು ವಿಳಾಸ | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ವಲಯ ಕಛೇರಿ, ಕರೂರು ಕೈಗಾರಿಕಾ ಪ್ರದೇಶ, ಪ್ಲಾಟ್ ನಂ. ಸಿಎ (I-ಬಿ), ಪಿ.ಬಿ.ರಸ್ತೆ, ದಾವಣಗೆರೆ- 577 066. |
| 2. | ಉದ್ದೇಶಿತ ಯೋಜನೆಯ ಸ್ಥಳ | ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಸಾರಥಿ ಮತ್ತು ಕರಲಹಳ್ಳಿ ಗ್ರಾಮ ಇಲ್ಲಿ ವಿವಿಧ ಸರ್ವೆ ನಂಬರುಗಳನ್ನೊಳಗೊಂಡ ಒಟ್ಟು 136.03 ಹೆಕ್ಟೇರ್ (336 ಎಕರೆ 5 ಗುಂಟೆ) ಪ್ರದೇಶದಲ್ಲಿ **'ಸಾರಥಿ ಕುರುಬರಹಳ್ಳಿ ಕೈಗಾರಿಕಾ ಪ್ರದೇಶ – ಎರಡನೇ ಹಂತ'**ವನ್ನು ಅಭಿವೃದ್ಧಿಪಡಿಸುವ ಯೋಜನೆ |
| 3. | ಯೋಜನೆಯ ಕಾರ್ಯಚಟುವಟಿಕೆ | ಕಾರ್ಖಾನೆಗಳನ್ನು ಸ್ಥಾಪಿಸಲು ಇಂಡಸ್ಟ್ರೀಯಲ್ ಪ್ಲಾಟ್‌ಗಳನ್ನು. ಅಭಿವೃದ್ಧಿಪಡಿಸಲು ಒಟ್ಟು 136.03 ಹೆಕ್ಟೇರ್ (336 ಎಕರೆ 5 ಗುಂಟೆ) ಪ್ರದೇಶದಲ್ಲಿ **'ಸಾರಥಿ ಕುರುಬರಹಳ್ಳಿ ಕೈಗಾರಿಕಾ ಪ್ರದೇಶ – ಎರಡನೇ ಹಂತ'** ದ ರಚನೆ. |
| 4. | ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ | **04ನೇ ನವೆಂಬರ್ 2023 ರಂದು ಶನಿವಾರ ಬೆಳಗ್ಗೆ 11.00 ಘಂಟೆಗೆ ಯೋಜನಾ ಸ್ಥಳ, 'ಸಾರಥಿ ಕುರುಬರಹಳ್ಳಿ ಕೈಗಾರಿಕಾ ಪ್ರದೇಶ - ಎರಡನೇ ಹಂತ, ಸಾರಥಿ ಕುರುಬರಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.** |
| 5. | ಯೋಜನೆಯ ವೆಚ್ಚ | **ರೂ. 183.76 ಕೋಟಿಗಳು.** |
| 6. | ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ | (ಅ) ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ,<br>(ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ದಾವಣಗೆರೆ<br>(ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ<br>(ಈ) ತಹಶಿಲ್ದಾರರ ಕಛೇರಿ, ತಾಲ್ಲೂಕು ಕಛೇರಿ, ಹರಿಹರ<br>(ಉ) ತಾಲ್ಲೂಕು ಪಂಚಾಯತ್ ಕಛೇರಿ, ಹರಿಹರ<br>(ಊ) ಗ್ರಾಮ ಪಂಚಾಯತಿ ಕಾರ್ಯಾಲಯ, ಸಾರಥಿ ಗ್ರಾಮ<br>(ಋ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಂಡಜ್ಜಿ ಗ್ರಾಮ<br>(ಎ) ನಗರ ಸಭೆ ಕಛೇರಿ, ಹರಿಹರ<br>(ಐ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ನಂ.501, 'ಸಿ' ಬ್ಲಾಕ್, ದೇವರಾಜ ಅರಸ್ ಬಡಾವಣೆ, ದಾವಣಗೆರೆ – 577 006.<br>(ಒ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ. ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034.<br>(ಔ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001. |

**ಸೂಚನೆ :** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ, ಟಿಪ್ಪಣಿಗಳು ಅಹವಾಲುಗಳನ್ನು ಮೌಖಿಕ/ಲಿಖಿತ ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ **(ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು, ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ :http://kspcb.karnataka.gov.inನಲ್ಲಿ ಪಡೆಯಬಹುದು.**

ಸಹಿ/- **ಸದಸ್ಯ ಕಾರ್ಯದರ್ಶಿ**
**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

# ಲಾಭದಾಯಕದಲ್ಲಿ ಕಟ್ಟಡ ಕಟ್ಟುವ, ಕ್ವಾರಿ ಕಾರ್ಮಿಕರ ಸಹಕಾರ ಸಂಘ



ದಾವಣಗೆರೆ ಅ. 3 - ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ನಿಟ್ಟಿನಲ್ಲಿ ಜಿಲ್ಲಾ ಕಟ್ಟಡ ಕಟ್ಟುವ ಕಲ್ಲು ಒಡೆಯುವ ಮತ್ತು ಕ್ವಾರಿ ಕಾರ್ಮಿಕರ ಸಂಘವು ಶ್ರಮಿಸುತ್ತಿರುವುದು ಶ್ಲಾಘನೀಯ ವಾದುದು. ಸಹಕಾರ ಸಂಘದ ಸೌಲಭ್ಯಗಳನ್ನು ಬಳಸಿಕೊಂಡು ಕಟ್ಟಡ ಕಾರ್ಮಿಕರು ಆರ್ಥಿಕವಾಗಿ ಸಬಲರಾಗಬೇಕು ಎಂದು ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಕರೆ ನೀಡಿದರು.

ನಗರದ ಕಾಂ. ಪಂಪಾಪತಿ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ವಿವಿಧೋದ್ದೇಶ ಸಹಕಾರ ಸಂಘದ 8 ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ದಿನಮಾನದಲ್ಲಿ ಹಣಕಾಸು ಸಂಸ್ಥೆಯನ್ನು ನಡೆಸುವುದು ತುಂಬಾ ಕಷ್ಟದಾಯಕವಾಗಿರುವಾಗ ಕಾರ್ಮಿಕ ಸಂಘವೊಂದು ತನ್ನ ಸದಸ್ಯರ ಶ್ರೇಯೋಭಿವೃದ್ಧಿಗಾಗಿ ಕಳೆದ 8 ವರ್ಷಗಳಿಂದ ನಿರಂತರವಾಗಿ ಸಹಕಾರ ಸಂಘವನ್ನು ಮುನ್ನಡೆಸಿ ಕೊಂಡು ಬರುತ್ತಿರುವುದು ಸಂತೋಷದ ವಿಷಯ. ಕಾರ್ಮಿಕರು ತಮ್ಮ ಕಷ್ಟಾರ್ಜಿತದ ಉಳಿತಾಯದ ಹಣವನ್ನು ಈ ಸಹಕಾರ ಸಂಘದಲ್ಲಿ ಠೇವಣಿ ಇಡುವುದರ ಮೂಲಕ, ದಿನ ವಹಿ ಪಿಗ್ಮಿ ಕಟ್ಟುವುದರ ಮೂಲಕ ಹೆಚ್ಚಿನ ವ್ಯವಹಾರವನ್ನು ಮಾಡಬೇಕು. ಜೊತೆಗೆ ತಮ್ಮ ಕಷ್ಟ ಕಾಲದಲ್ಲಿ ಸಹಕಾರ ಸಂಘದಿಂದ ಸಾಲವನ್ನು ಪಡೆದು ಕ್ಲುಪ್ತ ಸಮಯದಲ್ಲಿ ಅದರ ಮರುಪಾವತಿ ಮಾಡಬೇಕು. ಹಾಗಾದಲ್ಲಿ ಮಾತ್ರ ಸಹಕಾರ ಸಂಘಗಳು ಉಳಿಯಲು ಸಾಧ್ಯವೆಂದು ನಾಯರಿ ಹೇಳಿದರು.

ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕಾರ್ಮಿಕ ಮುಖಂಡ ಹಾಗೂ ಸಹಕಾರ ಸಂಘದ ಅಧ್ಯಕ್ಷ ಕಾಂ. ಹೆಚ್.ಜಿ.ಉಮೇಶ್ ಆವರಗೆರೆ ಮಾತನಾಡಿ, ಕಾರ್ಮಿಕರಿಗಾಗಿ ಈ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ಸಹಕಾರ ಸಂಘ ಸ್ಥಾಪನೆಯಾಗಿ 8 ವರ್ಷಗಳ ಬಳಿಕ 2022-23 ರ ಸಾಲಿನಲ್ಲಿ ಲಾಭ ದಾಖಲಿಸುತ್ತಿದೆ. ಮುಂದಿನ ದಿನಗಳಲ್ಲಿ ಸಹಕಾರ ಸಂಘವನ್ನು ಇನ್ನಷ್ಟು ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ಕಾರ್ಮಿಕ ಮುಖಂಡರಾದ ಆನಂದರಾಜ್, ಮೊಹಮದ್ ಭಾಷಾ, ಗುಡಿಹಳ್ಳಿ ಹಾಲೇಶ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಹಕಾರ ಸಂಘದ ಉಪಾಧ್ಯಕ್ಷ ಪಿ.ಕೆ.ಲಿಂಗರಾಜ್, ನಿರ್ದೇಶಕರುಗಳಾದ ವಿ.ಲಕ್ಷ್ಮಣ್, ಟಿ.ಭೀಮಾ ರೆಡ್ಡಿ, ಡಿ.ಷಣ್ಮುಗಂ, ಜಿ.ಆರ್.ನಾಗರಾಜ್, ಸೈಯದ್ ಗೌಸ್‌ಪೀರ್, ಶಿವಕುಮಾರ್ ಡಿ. ಶೆಟ್ಟರ್, ಹಾಲಮ್ಮ, ಮುರುಗೇಶ್ .ಎಸ್, ಸಿದ್ದಲಿಂಗಪ್ಪ ಎಸ್.ಎಂ., ಎಂ.ಮುತ್ತೇಶ್, ಫಯಾಜ್ ಅಹ್ಮದ್ ಹಾಗೂ ಕಾರ್ಯದರ್ಶಿ ಕೆ.ಆಶಾ, ಸಿಬ್ಬಂದಿಗಳಾದ ಯು.ವಿಶಾಲಾಕ್ಷಿ, ಎಸ್.ಕವಿತಾ ಹಾಗೂ ಬಿ.ಸಿ.ಹರೀಶ್ ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಜೈನಮುನಿ ಅಭಯಶೇಖರ ಶ್ರೀ ಜನ್ಮ ದಿನಾಚರಣೆ



ರಾಣೇಬೆನ್ನೂರು, ಅ.3- ಚಾತುರ್ಮಾಸದ ಪುಣ್ಯ ದಿನಗಳ ಈ ಸಂದರ್ಭದಲ್ಲಿ, ಬೆಂಗಳೂರಿನಲ್ಲಿ ವಾಸ್ತವ್ಯವಿರುವ ಜೈನ ಮುನಿ ಆಚಾರ್ಯ ಅಭಯಶೇಖರ ಸುರೀಶ್ವರಜೀ ಅವರ ಜನ್ಮ ದಿನವನ್ನು ಇಲ್ಲಿನ ಜೈನ ಶ್ವೇತಾಂಬರ ಸಂಘದವರು ಜೈನ್ ಧರ್ಮಶಾಲೆಯಲ್ಲಿ ಆಚರಿಸಿದರು.

ಉಪವಾಸ ವ್ರತಗಳ ಆಚರಣೆಯಿಂದ ಮನಶ್ಯಾಂತಿಯೊಂದಿಗೆ ಉತ್ತಮ ಆರೋಗ್ಯಶಾಲಿಗಳಾಗಿ ಬದುಕು ನಡೆಸಬಹುದು ಎಂದು ಹೇಳಿದ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ವಿಜಯದೇವ ಸುರೀಶ್ವರಜೀ ಮುನಿಗಳು, ಮುಂದೆ 5 ದಿನ ನಡೆಯುವ ಲಕ್ಷ್ಮಿ, ಸರಸ್ವತಿ ವ್ರತಗಳ ಆಚರಣೆಯಲ್ಲಿ ಸಮಾಜದ ಎಲ್ಲ ಬಂಧುಗಳು ಭಾಗವಹಿಸಿ, ಒತ್ತಡದ ಬದುಕಿನಲ್ಲಿ ಶಾಂತಿ, ನೆಮ್ಮದಿ ಪಡೆದುಕೊಳ್ಳಬೇಕು ಎಂದರು. ಮೇರು ಪದ್ಮರಾಜ ಮುನಿಗಳು ಜೊತೆಗಿದ್ದರು.

ಮುನಿಗಳ ಹುಟ್ಟುಹಬ್ಬ ಕಾರ್ಯಕ್ರಮಕ್ಕಾಗಿ ತಯಾರಿಸಿದ ಅಂಬಲ್ (ಉಪ್ಪು, ಹುಳಿ, ಖಾರ ರಹಿತ ಸಪ್ಪೆ) ಅಡುಗೆಯ ಊಟದಲ್ಲಿ ಇಬ್ಬರು ಇತರೆ ಸಮಾಜದ ಮಹಿಳೆಯರು, ಜೈನ್ ಸಮಾಜದ ಮಹಿಳೆಯರು, ಪುರುಷರು ಪಾಲ್ಗೊಂಡಿದ್ದರು. ಸಮಾಜದ ಅಧ್ಯಕ್ಷ ಪ್ರಕಾಶ ಜೈನ್, ಸುರೇಶ ಜೈನ್, ಕಿಶೋರ ಗಾಂಧಿ, ಮಹೇಶ ಜೈನ್, ರಾಜೇಶ ಜೈನ್, ಚಂದನ ಜೈನ್ ಮತ್ತಿತರರಿದ್ದರು.

## 'ಲಿಂಗಾಯತ' ಮೀಸಲಾತಿ ಸಿಗುತ್ತಿಲ್ಲ

**(1ನೇ ಪುಟದಿಂದ)** ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಮುರುಘಾ ಮಠದ ಉಸ್ತುವಾರಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿ, ಸಂಸ್ಕಾರದಿಂದ ನಾವು ಲಿಂಗವಂತರು. ಆದರೆ, ಮೀಸಲಾತಿಯಿಂದ ಹಡಪದ ಸಮುದಾಯಕ್ಕೆ ಸೇರಿದವರು ಎಂದು ಗುರುತಿಸಿಕೊಳ್ಳುವ ಮೂಲಕ ಸರ್ಕಾರದಿಂದ ಸೌಲಭ್ಯಗಳನ್ನು ಕೇಳಬೇಕಿದೆ ಎಂದರು.

ಸಾಹಿತಿ ಬಾಮ ಬಸವರಾಜಯ್ಯ ಮಾತನಾಡಿ, ಮೀಸಲಾತಿಗಾಗಿ ಹಾವನೂರು ವರದಿ ರೂಪಿಸಿದ ಸಂದರ್ಭದಲ್ಲಿ ಲಿಂಗಾಯತ ಹಡಪದವರನ್ನು 3ಬಿ ಪ್ರವರ್ಗಕ್ಕೆ ಸೇರಿಸಲಾಗಿದೆ. ಅವರನ್ನು 2ಎಗೆ ಸೇರ್ಪಡೆ ಮಾಡುವ ಜವಾಬ್ದಾರಿ ಈಗಿನ ಜನಪ್ರತಿನಿಧಿಗಳು ಹಾಗೂ ಸ್ವಾಮೀಜಿಗಳಿಗೆ ಇದೆ ಎಂದರು. ಬಿಜಾಪುರದ ಗಾಣಿಗೆರೆ ಪೀಠದ ಶ್ರೀ ಬಸವಕುಮಾರ ಸ್ವಾಮೀಜಿ ಆಶಯ ನುಡಿಗಳನ್ನಾಡಿದರು.

ವೇದಿಕೆಯ ಮೇಲೆ ತಂಗಡಗಿಯ ಶ್ರೀ ಹಡಪದ ಅಪ್ಪಣ್ಣ ಸ್ವಾಮೀಜಿ, ಹೊಸದುರ್ಗದ ಕುಂಚಿಟಿಗ ಸಂಸ್ಥಾನ ಮಠದ ಶ್ರೀ ಬಸವ ಶಾಂತವೀರ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಬಸವ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶಾಸಕ ಕೆ.ಎಸ್. ಬಸವಂತಪ್ಪ, ಮುಖಂಡರಾದ ತೇಜಸ್ವಿ ಪಟೇಲ್, ನಾಗರಾಜ್ ಹೇಮಗಿರಿ ಮೈಲಾರ, ಶಿವಯೋಗಿ ಹೊಸರಿತ್ತಿ, ಶಿರಮಗೊಂಡನಹಳ್ಳಿಯ ಶಿವಾನಂದ ಗುರೂಜಿ, ಚೇತನಾ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟಕ್ಕೆ ನಿಸರ್ಗ ವಿದ್ಯಾರ್ಥಿಗಳು



ದಾವಣಗೆರೆ, ಅ.3- ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗ ವಹಿಸಿದ್ದ ನಗರದ ನಿಸರ್ಗ ಕಾನ್ವೆಂಟ್‌ನ 7ನೇ ತರಗತಿ ವಿದ್ಯಾರ್ಥಿಗಳಾದ ಲಾವಣ್ಯ ವಿ.ಜೈನ್ 200 ಮೀ.ಓಟದಲ್ಲಿ ದ್ವಿತೀಯ, ಆರ್.ಭರತ್ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಜಾತಿ ಗಣತಿ ವರದಿ ಸಲ್ಲಿಕೆಗೆ ಸೂಚನೆ

**(1ನೇ ಪುಟದಿಂದ)** ಪೂರ್ಣವಾಗಿರಲಿಲ್ಲ. ನಂತರ ಸಮ್ಮಿಶ್ರ ಸರ್ಕಾರ ಇರುವಾಗ ಅಂದಿನ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿ ಪುಟ್ಟರಂಗಶೆಟ್ಟಿ ಇದ್ದರು. ಆಗ ವರದಿಯನ್ನು ಪಡೆಯಲಿಲ್ಲ ಎಂದು ಆರೋಪಿಸಿದ್ದಾರೆ. ನಂತರ ಆಯೋಗಕ್ಕೆ ಜಯಪ್ರಕಾಶ್ ಹೆಗಡೆಯವರನ್ನು ಬಿಜೆಪಿ ಸರ್ಕಾರ ನೇಮಿಸಿತ್ತು. ಅವರು ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಆದರೆ ಇನ್ನೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ.

ಶಿವಮೊಗ್ಗದಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳು ಸೇರಿದಂತೆ ಪೊಲೀಸರ ಮೇಲೆ ಕಲ್ಲು ತೂರಾಟವಾಗಿರುವ ಬಗ್ಗೆ ಮಾತನಾಡಿ ಘಟನೆಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

# ಭಾರತ ಬರಗಾಲಕ್ಕೆ ತುತ್ತಾಗಿದ್ದಾಗ ವಾರಕ್ಕೊಮ್ಮೆ ಊಟ ತ್ಯಜಿಸಲು ಕರೆ ನೀಡಿದ್ದ ಶಾಸ್ತ್ರೀಜಿ



**ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಪ್ರೊ. ಚನ್ನಪ್ಪ ಪಲ್ಲಾಗಟ್ಟೆ ಸ್ಮರಣೆ**

ದಾವಣಗೆರೆ, ಅ. 3- ಭಾರತ ಸೇವಾದಳದ ವತಿಯಿಂದ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿಯನ್ನು ಮತ್ತು ಸರ್ವಧರ್ಮ ಪ್ರಾರ್ಥನೆ ಹಾಗೂ ಸ್ವಚ್ಛತಾ ಕಾರ್ಯಕ್ರಮವನ್ನು ನಗರದ ಭಾರತ ಸೇವಾದಳ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ದಾವಣಗೆರೆ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ ಅವರು ಬಾಪೂಜಿ ಮತ್ತು ಶಾಸ್ತ್ರೀಜಿಯವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಗಾಂಧೀಜಿ ಮತ್ತು ಶಾಸ್ತ್ರೀಜಿಯವರ ಬದುಕಿನ ಮೌಲ್ಯಾಧಾರಿತ ಜೀವನದ ಬಗ್ಗೆ ತಿಳಿಸಿದರು.

ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಪ್ರೊ.ಚನ್ನಪ್ಪ ಎಚ್. ಪಲ್ಲಾಗಟ್ಟೆ ಮಾತನಾಡಿ, ಸ್ವಾತಂತ್ರ ಹೋರಾಟದಲ್ಲಿ ಸಾವಿರಾರು ಜನ ಹುತಾತ್ಮರಾದರು. ಸತ್ಯ-ಅಹಿಂಸೆಯಿಂದ ಹೋರಾಟ ನಡೆಸಿದ ಮಹಾತ್ಮ ಗಾಂಧೀಜಿ ವಿಶ್ವಕ್ಕೆ ಮಹಾತ್ಮರಾದರು. ಲಾಲ್ ಬಹದ್ದೂರ್ ಶಾಸ್ತ್ರೀಜಿಯವರು ನೆಹರು ನಂತರ ಭಾರತದ ಎರಡನೆಯ ಪ್ರಧಾನಮಂತ್ರಿಯಾಗಿ ದಿಟ್ಟ ನಾಯಕತ್ವ ನೀಡಿದರು. ಅವರ ಕೇವಲ ಹದಿನೆಂಟು ತಿಂಗಳ ಆಡಳಿತದ ಸಮಯದಲ್ಲಿ ಇಡೀ ಭಾರತ ದೇಶ ತೀವ್ರವಾದ ಬರಗಾಲಕ್ಕೆ ತುತ್ತಾಗಿದ್ದ ಸಂದರ್ಭದಲ್ಲಿ ವಾರಕ್ಕೊಮ್ಮೆ ಊಟವನ್ನು ತ್ಯಜಿಸಲು ಕರೆ ನೀಡಿದರು. ಆಗ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದ ತಾವೂ ಕೂಡ ಆ ಕರೆಗೆ ಸ್ಪಂದಿಸಿ ಇಲ್ಲಿಯವರೆಗೂ ಪ್ರತಿ ಶನಿವಾರ ರಾತ್ರಿ ಊಟವನ್ನು ತ್ಯಜಿಸಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷ ಆಲೂರು ವಿಜಯಕುಮಾರ್, ತಾಲ್ಲೂಕು ಸೇವಾದಳ ಅಧ್ಯಕ್ಷ ಹಾಸಬಾವಿ ಕರಿಬಸಪ್ಪ, ತಾಲ್ಲೂಕು ಸಮಿತಿ ಉಪಾಧ್ಯಕ್ಷ ಕೆ.ಆರ್ ಸಿದ್ದೇಶಪ್ಪ, ಜಿಲ್ಲಾ ಸಮಿತಿ ಸದಸ್ಯರಾದ ಸಿದ್ದಲಿಂಗಪ್ಪ, ಬಿ.ಪಿ. ಪ್ರಸಾದ್, ದೈಹಿಕ ಶಿಕ್ಷಣಾಧಿಕಾರಿ ಲೋಕೇಶಪ್ಪ, ಶಾಲಾ ಮಕ್ಕಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಲಯ ಸಂಘಟಕ ಎಂ. ಅಣ್ಣಪ್ಪ ಸ್ವಾಗತಿಸಿದರು. ಎ.ಆರ್. ಗೋಪಾಲಪ್ಪ ನಿರೂಪಿಸಿದರು. ಭಾನುಮತಿ ವಂದಿಸಿದರು.

## ಅನ್ಯಾಯ : ಎಸ್ಸೆಸ್ ಹೇಳಿಕೆಗೆ ಬೆಂಬಲ

**(1ನೇ ಪುಟದಿಂದ)** ಆಧಾರದ ಮೇಲೆ ದೂರ ಇಡುವುದು, ಹುದ್ದೆ ನೀಡದಿರುವುದು ಸರಿಯಲ್ಲ. ಶಾಸಕ ಶಾಮನೂರು ಶಿವಶಂಕರಪ್ಪನವರು ನೋವಿನಿಂದ ಆಡಿರುವ ಮಾತುಗಳನ್ನು ಸರಿಪಡಿಸಲು ಸರ್ಕಾರ ಕಾರ್ಯೋನ್ಮುಖವಾಗಬೇಕು ಎಂದರು.

ಎಲ್ಲಾ ಲಿಂಗಾಯತರಿಗೆ 2ಎ ಹಾಗೂ ಒ.ಬಿ.ಸಿ. ಮೀಸಲಾತಿ ಕಲ್ಪಿಸಬೇಕು. ಈ ಬಗ್ಗೆ ಬಜೆಟ್ ನಂತರ ತಮ್ಮೊಂದಿಗೆ ಮಾತನಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಆದರೆ, ಇದುವರೆಗೂ ಸಭೆ ಕರೆದಿಲ್ಲ. ಈ ಹಿನ್ನೆಲೆಯಲ್ಲಿ ಹೋರಾಟಕ್ಕೆ ಮುಂದಾಗಿರುವುದಾಗಿ ಶ್ರೀಗಳು ಇದೇ ಸಂದರ್ಭದಲ್ಲಿ ಹೇಳಿದರು.

ಎಲ್ಲಾ ಸಮಾಜಗಳಿಗೆ ಸಾಮಾಜಿಕ ನ್ಯಾಯ ಕೊಡಲು ದೇಶದಲ್ಲಿ ವೈಜ್ಞಾನಿಕ ಆಧಾರದ ಮೇಲೆ ಜಾತಿ ಗಣತಿ ನಡೆಸಬೇಕು ಎಂದು ಶ್ರೀಗಳು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಿಜವಾದ ಜಾತಿ ಗಣತಿ ಮಾಡಿದರೆ ಅದು ದೇಶದ ಪ್ರಗತಿಗೆ ನೆರವಾಗಲಿದೆ. ಕೇಂದ್ರ ಸರ್ಕಾರವೇ ಜಾತಿ ಗಣತಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಹೀಗಾಗಿ ಕೇಂದ್ರ ಸರ್ಕಾರವೇ ದೇಶಾದ್ಯಂತ ಜಾತಿ ಗಣತಿ ನಡೆಸಬೇಕು ಎಂದು ಹೇಳಿದರು.

## ಜನಪರ ಯೋಜನೆಗಳ ಜಾರಿ

**(1ನೇ ಪುಟದಿಂದ)** ಹಣ ಕೊಡಲ್ಲ, ಸರ್ಕಾರ ಕೊಡಲ್ಲ, ಅದು ತಿನ್ನುವಷ್ಟು ತಿಂದು ಕೊಡ್ತಾರೆ. ಇದನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದೇವೆ ಆಗುತ್ತಿಲ್ಲ ಎಂದರು.

ನಮ್ಮ ಸರ್ಕಾರ ಮನೆಗಳನ್ನು ಕೊಟ್ಟಿದೆ ಎಂದಾಗ ನಿಟ್ಟೂರು ಗ್ರಾಮದ ಎಚ್.ಟಿ.ವನಜಾಕ್ಷಿ ಅವರು ಎಲ್ಲಿ ಕೊಟ್ಟಿದ್ದಾರೆ ಸಾರ್, 5 ವರ್ಷಗಳಿಂದ ಒಂದು ಮನೆನೂ ಬಂದಿಲ್ಲ. ಬಡವರು ಇನ್ನು ಗುಡಿಸಲಲ್ಲೇ ಇದ್ದಾರೆ ಎಂದು ಕೇಳಿದಾಗ, ಇಲ್ಲ ಕೊಟ್ಟಿದೆ ನಿಮಗೆ ಗೊತ್ತಿಲ್ಲ ಎಂದು ಸಮಜಾಯಿಷಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಸುಧಾ ಶಿವಾನಂದ ಬಾರ್ಕಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಕಿರಣ್ ನಾಯ್ಕ್, ಅಕ್ಷಯ್, ಮುಖಂಡರಾದ ಎಚ್.ಟಿ.ಶಿವಯೋಗಿ, ರಮೇಶ್ ಹುಲಿ, ಬಾರ್ಕಿ ಮಲ್ಲಿ ಕಾರ್ಜುನ, ಸಿದ್ದಲಿಂಗಸ್ವಾಮಿ, ಸೋಮಶೇಖರ, ಮಂಜುನಾಥ, ಮತ್ತೂರು ಬಸವರಾಜ, ನಾಗರಾಜ, ಹನುಮಂತ ಮತ್ತು ಗ್ರಾಮ ಪಂಚಾಯ್ತಿ ಸದಸ್ಯರು ಉಪಸ್ಥಿತರಿದ್ದರು.

## ಕೆಸಿಸಿ ಬ್ಯಾಂಕ್ ನಿರ್ದೇಶಕರಿಗೆ ಸನ್ಮಾನ



**ರಾಣೇಬೆನ್ನೂರು**

ರಾಣೇಬೆನ್ನೂರು, ಅ.3- ಕೆಸಿಸಿ ಬ್ಯಾಂಕಿನ ನೂತನ ನಿರ್ದೇಶಕ ಮಳ್ಳಪ್ಪ ನಿಂಗಜ್ಜನವರ ಅವರನ್ನು ತಾಲ್ಲೂಕಿನ ಹಿರೇಮಾಗನೂರು ಪ್ರಾಥಮಿಕ ಪತ್ತಿನ ಕೃಷಿ ಸಹಕಾರಿ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಕಾರ್ಯದರ್ಶಿ ಜಗದೀಶಗೌಡ ಪಾಟೀಲ, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ ಮತ್ತು ಇತರರು ಭಾಗವಹಿಸಿದ್ದರು.

## ಶಾಮನೂರಿನಲ್ಲಿ ಮಕ್ಕಳಿಗೆ ಬಟ್ಟೆ ವಿತರಣೆ



ದಾವಣಗೆರೆ,ಅ.3- ಶಾಮನೂರಿನ ಜನತಾ ಕಾಲೋನಿಯ ಎಸ್.ಕೆ. ಕರೇಗೌಡಪ್ಪ ಸ್ಮಾರಕ ಸರ್ಕಾರಿ ಹಿರಿಯ ಪ್ರಥಮಿಕ ಶಾಲೆಯೆಲ್ಲಿ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕಲ್ಲಳ್ಳಿ ರುದ್ರೇಶ್ ಅವರು ಬಡ ಮಕ್ಕಳಿಗೆ ಬಟ್ಟೆ ವಿತರಣೆ ಮಾಡಿದರು. ಕಣ್ಣಾಳ ಅಂಜಿನಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ನೇತ್ರಾವತಿ, ಅಂಜಿನಮ್ಮ, ಮಂಗಳಮ್ಮ, ಶ್ರುತಿ, ದೀಪ ಮತ್ತಿತರರು ಉಪಸ್ಥಿತರಿದ್ದರು.

## ಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ

**(1ನೇ ಪುಟದಿಂದ)** ಮಾಡಬಹುದು. ಆದರೆ ಆ ಪ್ರತಿಭಟನೆಗೆ ಸಕಾರಣವಿರಬೇಕು ಮತ್ತು ಶಾಂತಿಯುತವಾಗಿ ನಡೆಯಬೇಕು ಎಂದು ಹೇಳಿದರು. ಕುರುಬ ಸಮಾಜದ ಸಮಾವೇಶದ ಸಂದರ್ಭದಲ್ಲಿ ಲಿಂಗಾಯತ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂಬ ಕೂಗು ಎದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ನಮ್ಮ ಸರ್ಕಾರದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ. ಎಲ್ಲರನ್ನೂ ಒಳಗೊಂಡಂತಹ ಆಡಳಿತದ ನೀತಿಯನ್ನು ನಮ್ಮ ಸರ್ಕಾರ ಹೊಂದಿದೆ ಎಂದರು.

ಬೇರೆ ಬೇರೆ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಉಪ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ, ಒಕ್ಕಲಿಗರ ಹೋರಾಟ ಸಮಿತಿ ನೀಡಿದ ಪತ್ರವನ್ನು ಆಧರಿಸಿ, ಉಪ ಮುಖ್ಯಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ಇಂದಷ್ಟೇ ಆ ಪತ್ರ ನೋಡಿದ್ದೇನೆ ಎಂದು ತಿಳಿಸಿದರು.


**ಸೈಟ್ ಮಾರಾಟಕ್ಕೆ (KHB)** (for immediately register only) ಕರ್ನಾಟಕ ಗೃಹ ಮಂಡಳಿ (ಕಮೀಷನ್ +ರಿಜಿಸ್ಟರ್ ಸೇರಿ) 20x30 ಉತ್ತರ (13.50 ಲಕ್ಷ), 30x40 ದಕ್ಷಿಣ (32 ಲಕ್ಷ), 40x60 ದಕ್ಷಿಣ (64 ಲಕ್ಷ). ಕಿರಣ್ ಭೂಸನೂರ್ (ಏಜೆಂಟ್) 98440-63409 GOOD LOCATION

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ** 50x80 North, 40x60 North, 120 ಅಡಿ ರೋಡಿಗಿದೆ, 30x50 East ಮನೆ, 40x60, 40x60 South ಅಕ್ಕ-ಪಕ್ಕ. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಶೋರೂಂಗೆ ಬೇಕಾಗಿದ್ದಾರೆ** Shanti Electric Vehicles Double Decor Furniture Female - ಮಹಿಳೆಯರು Computer Office - 02 No.s. Showroom Sales - 01 No.s Male - ಪುರುಷರು Showroom Sales - 02, Mechanics - 02 BSNL Circle, Davangere. 92432 19553

**ಬೇಕಾಗಿದ್ದಾರೆ** ಲಿಂಗಾಯಿತ ಮನೆಯಲ್ಲಿ ಪೇಷಂಟ್ ನೋಡಿಕೊಳ್ಳಲು ಹುಡುಗ ಬೇಕಾಗಿದ್ದಾರೆ. 74830 48533 94483 38709

**ಶಿವ ಸೈಬರ್ ಕೆಫೆ** ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಮಾಡಲು ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. 98808 23450

**EC / ಇಸಿ, E-swathu, Khatha Change Building Licence & Property Documents, Loans-All banks** 96118-66449

**WANTED** We are hiring Store Incharge & Billing, Interior Designer (3D) Required : (Male/Female) Salary : 8000 to 15000 depends on Experience. Location : RCB DECORS Raitha Sanga Compound P.B.Road, Near Apoorva Restorent, Davangere. 99722 60333, 72046 23133

**ಮನೆ ಬಾಡಿಗೆಗೆ ಇದೆ** ಕುವೆಂಪು ನಗರ 6ನೇ ಕ್ರಾಸ್, 13ನೇ ಮೇನ್, ಎಂ.ಸಿ.ಸಿ ಬಿ ಬ್ಲಾಕ್, ದಾವಣಗೆರೆ. ಗ್ರೌಂಡ್ ಫ್ಲೋರ್, 2 ಬೆಡ್ ರೂಂ, ಬೋರ್ ವೆಲ್, ಮುನ್ಸಿಪಲ್ ನೀರಿನ ಸೌಲಭ್ಯವಿದೆ. 96325 97507, 99453 33707

**ಶ್ರೀ ಗುರು ವಾಟರ್ ಟ್ಯಾಂಕ್ ಕ್ಲೀನಿಂಗ್ ಸರ್ವೀಸ್** ನೀವು ವಾಟರ್ ಟ್ಯಾಂಕ್ ಕ್ಲೀನಿಂಗ್ ಪರಿಣಿತರನ್ನು ಸಂಪರ್ಕಿಸಿ : ನಿಮ್ಮ ಮನೆಯ ನೀರಿನ ಟ್ಯಾಂಕನ್ನು ಕ್ಲೀನ್ ಮಾಡಿಸಿ : ಪ್ರಕಾಶ್ ಕೆ.ಎಸ್. 63642 77838, 90354 04176

**ಸೈಟ್ ಮಾರಾಟಕ್ಕಿದೆ** ದಾವಣಗೆರೆಯ ಹೊರ ವಲಯದಲ್ಲಿ 6ನೇ ಮೈಲಿಕಲ್ಲು ಹತ್ತಿರ, ಮೂಲಭೂತ ಸೌಕರ್ಯ ಹೊಂದಿದ ಲೇಔಟ್‌ನಲ್ಲಿರುವ 30x40 ಅಳತೆಯ ಸೈಟ್ ಮಾರಾಟಕ್ಕಿದೆ. 99009 17161

**ಬೇಕಾಗಿದ್ದಾರೆ** ಸಿಮೆಂಟ್ ಮಾರ್ಕೆಟಿಂಗ್‌ನಲ್ಲಿ ಆಸಕ್ತಿಯಿರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ : ಆನಂದ ಹಾರ್ಡ್‌ವೇರ್ ಅಂಡ್ ಪೇಂಟ್ಸ್ ಮಂಡಿಪೇಟೆ, ದಾವಣಗೆರೆ.

**2 BHK HOUSE FOR RENT** (Ground Floor), Shishunaladheesha # 3993/27, Kuvempu Nagar MCC B block, Opp. SS Mall, 20.N21 main Road, Davangere. only for Vegetarian 94480 42155

**ಮನೆ ಮಾರಾಟಕ್ಕಿದೆ** 3 BHK - 30x63, ಡೋ.ನಂ. 2656/28 ಎಸ್.ಎಸ್. ಲೇಔಟ್, ಬಿ ಬ್ಲಾಕ್, 3ನೇ ಮೇನ್ ರೋಡ್, ವೆಸ್ಟ್ ಫೇಸ್. 84950 88884 98446 67785

**ಮನೆ ಲೀಸ್‌ಗೆ ಇದೆ** 2BHK, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. 1ನೇ ಮಹಡಿಯಲ್ಲಿ. (ಸಸ್ಯಹಾರಿಗಳಿಗೆ ಮಾತ್ರ) ವಿಳಾಸ : 1ನೇ ಮೇನ್, 5ನೇ ಕ್ರಾಸ್, ಸರಸ್ವತಿ ನಗರ, ಬಿ ಬ್ಲಾಕ್, ದಾವಣಗೆರೆ. 76191 15208

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.) **ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ** (ಕಳೆದ 21ನೇ ವರ್ಷಗಳ ಸೇವೆಯಲ್ಲಿ) www.lingayathweds.com ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. ಮೊ: 94481 59303, 80509 52637

**ಹುಡುಗರು ಬೇಕಾಗಿದ್ದಾರೆ** ಟಿ ಶಾಪ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. 99800 32310

**ಬೇಕಾಗಿದ್ದಾರೆ** ಲೇಡಿಸ್ ರೆಡಿಮೇಡ್ ಶೋ ರೂಂನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಅನುಭವ ಇರುವವರಿಗೆ ಮೊದಲ ಆದ್ಯತೆ. ಡಿಗ್‌ಜಾಮ್ ಲೇಡಿಸ್ ವೇರ್ ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. 89518 96908

**ಬೇಕಾಗಿದ್ದಾರೆ** ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 10,000/- ಊಟ, ರೂಂ ಉಚಿತ. ವಯಸ್ಸು 18 ರಿಂದ 30 97400 98047

**WANTED** ACCOUNTS EXECUTIVE-2 POST (2-3 years Experience) Shamanur Sugars Ltd., 374, P.J. Extension, 4th main, Davangere. 9844120003

**ನೇರ ಪರೀಕ್ಷೆಗಳು** SSLC, PUC (ARTS/COMM/SCI) NTC- ನರ್ಸರಿ ಟೀಚರ್ಸ್ ಟ್ರೈನಿಂಗ್, ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಗಾಂಧಿ ಸರ್ಕಲ್, ಮೋತಿ ಸ್ವೀಟ್ಸ್ ಪಕ್ಕ ದಾವಣಗೆರೆ. ಸಂಪರ್ಕಿಸಿ : 86602 35013

**ಕಾಶ್ಮೀರ ಪ್ರವಾಸ** 11th ಅಕ್ಟೋಬರ್‌ನಿಂದ 6 ದಿನಗಳ ಸುಸಜ್ಜಿತ ಲಕ್ಸುರಿ ಟೂರ್ ಪ್ಯಾಕೇಜ್ DVG World Tours 99006 66122

**ಬೇಕಾಗಿದ್ದಾರೆ** ಶೀಘ್ರದಲ್ಲಿ ಕೋ-ಆಪ್ ಸೊಸೈಟಿ ಪ್ರಾರಂಭ PUC ಹಾಗೂ B.com ಆದ ಹೆಣ್ಣು ಮಕ್ಕಳು ಹಾಗೂ ಪಿಗ್ಮಿ ಕಲೆಕ್ಟರ್ ಬೇಕಾಗಿದ್ದಾರೆ. 79751 07268

**Finance Advisor** Full Times Job's Female. Job Role Telecaller Work time : 9.30AM to 6.30 PM & every Sunday holiday. Salary : 6,000 to 10,000 +Incentives. Qualification : 10th to 12 PUC or Degree. Age Limit : 19 to 29. Freshers & experience call or whatsapp 77959 44991, 96201 50544

**AVOID MOSQUITOES** Mosquito Net For Doors & Windowes. SRI GOWRI ENTERPRISES # 7C2, 4th Cross, Near Shaneshwara Temple, Karur Industrial Area, P.B. Road, Davangere-6 72049 94628

**GOLDEN OPPORTUNITY** Exclusively for the Retired/ Home Makers / Businessmen from Top MNC. part time/full time Flexible Timing, No. Investment. Age 30 above, Fixed Payout, huge incentives, PF, ESI, International Travel, Reward and recognition. 63632 34430

**ವ್ಯಾಪಾರ** 18 ವರ್ಷ ಮೇಲ್ಪಟ್ಟವರು ತಮ್ಮ ಬಿಡುವಿನ ವೇಳೆಯಲ್ಲಿ ಪ್ರತಿದಿನ ಹೆಚ್ಚು ಆದಾಯ ಪಡೆಯುವ ಸದಾವಕಾಶಕ್ಕೆ ಅಗತ್ಯ ಇರುವವರು ಇಂದೇ ಸಂಪರ್ಕಿಸಿ. 84969 57469, 96209 83691

**ಬೇಕಾಗಿದ್ದಾರೆ** ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ : 63639-54459

**ಗ್ಯಾಸ್‌ಗೀಸರ್ ರಿಪೇರಿ** ಎಲ್ಲಾ ಕಂಪನಿಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ನಿಮ್ಮ ಮನೆಗೇ ಬಂದು ರಿಪೇರಿ ಮಾಡಿಕೊಡುತ್ತೇವೆ. ಹಳೆಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ಖರೀದಿಸುತ್ತೇವೆ. ರತ್ನ ಮಾರ್ಕೆಟಿಂಗ್ 99019 40727

**TO LET** 2 BHK House for Lease Doggalli Compound, Near LIC Office, K.R. Road, Davangere. 94483 76399

**TUITION CENTRE** Tuitions for ICSE - CBSE STATE for 1st to 10th Std., M : 83109 32579

**ರಕ್ತ ದಾನ ಶ್ರೇಷ್ಠ ದಾನ**

**WANTED**

| JOB | NO |
|---|---|
| ACCOUNTANT | 01 |
| QUALIFICATION - B.COM. / M.COM. | 01 |
| PRODUCTION INCHARGE | 01 |
| STOCK & DESPATCH INCHARGE | 01 |
| DESIGNER (CORELDRAW WORK) | 01 |

REQUIRE COMPUTER KNOWLEDGE EXPERIENCE CANDIDATES FIRST PREFERENCE. CONTACT 9845379555 JAIN POLY PACKS Plot No : 15, KIADB, Karur Industrial Area, Textile Park NEAR DC OFFICE, DAVANAGERE-577005. KARNATAKA E-mail : jainpolypacks555@gmail.com

**2 BHK HOUSE FOR RENT/LEASE** Near Podar International in J.H. Patel Badavane, Davangere. 95359 99218, 88617 11072

**ಬೇಕಾಗಿದ್ದಾರೆ** ಲಿಂಗಾಯಿತರ ಮನೆಯಲ್ಲಿ ವೆಜ್ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. (ಸಂಬಳ- 8000) 94483 38709 74830 48533


**WANTED** SALES MAN DELIVERY BOY FOR COLGET PALMOLIVE VEERANARAYANA TRADERS N.R. ROAD, DAVANAGERE. 98860 97065

**LADY TEACHERS WANTED** For Nursery Classes LKG & UKG Degree - 2, NTC - 2 PUC - 2 M : 99866 17235

**ಲೋನ್ ಕೊಡಲಾಗುವುದು** ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಕಮರ್ಷಿಯಲ್ ಪ್ರಾಪರ್ಟಿ ಲೋನ್, ಆಸ್ತಿ ಅಡಮಾನ ಸಾಲ, NA approve layout, ಅಪಾರ್ಟ್‌ಮೆಂಟ್ ಕಟ್ಟಲು ಇನ್ನು ಅನೇಕ ಲೋನ್‌ಗಳಿಗೆ ಸಂಪರ್ಕಿಸಿ : 74835 24662

**ಬೇಕಾಗಿದ್ದಾರೆ** ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ -1, ಸೇಲ್ಸ್ ಮನ್-2, ಡಿಲೆವರಿ ಬಾಯ್ಸ್ -3, ಅನುಭವವುಳ್ಳವರು ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್ ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ. 94482 33326, 78991 35660

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ** ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ. ಡಾ|| ಎಚ್.ಐ. ದೊಡ್ಡಮನಿ (G.R.No.8969) ಡಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ M:9740523710

**ಮನೆ ಬಾಡಿಗೆಗೆ /ಲೀಸ್‌ಗೆ ಇದೆ** 1/2/3 BHK ಭೂಮಿಕಾ ನಗರ. ಶಿವಕುಮಾರಸ್ವಾಮಿ ಬಡಾವಣೆ. ಎಸ್.ಎಸ್. ಹೈಟೆಕ್ ಬಡಾವಣೆ. ಜಯನಗರ, ತರಳಬಾಳು ಬಡಾವಣೆ.(ಏಜೆಂಟ್) 73532 55225

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ** ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ. ಅಸ್ತಮಾ, ಕೀಲು ನೋವು ಡಾ|| ಎಸ್.ಎಂ. ಸೇಠಿ. ಫೋ. : 96322 95561 ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟುಗಳು ಮಾರಾಟಕ್ಕಿವೆ** ದಾವಣಗೆರೆಯ ಪಿ.ಬಿ. ರಸ್ತೆಯಲ್ಲಿರುವ ಜೈನ್ ಟೆಂಪಲ್ ಹಿಂಭಾಗದಲ್ಲಿ ಪಿ.ಬಿ. ರಸ್ತೆ ಹಾಗೂ NH-4 ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುತ್ತಿರುವ ನಿವೇಶನಗಳನ್ನು ಸುಲಭ 3 ಕಂತುಗಳಲ್ಲಿ Prebooking ಮಾಡಿಕೊಳ್ಳಲಾಗುತ್ತಿದೆ. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ : 90192 33241, 90198 88512, 70196 18397

**ರೈತ ಬಾಂಧವರೇ** ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ. 98451 04109

**ಡಾ|| ಸೋಮಶೇಖರ್. ಎಸ್.ಎ.** ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ.4.10.2023ರ ಬುಧವಾರ ನಾಳೆ ದಿ.5.10.2023ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ. ಅನುಗ್ರಹ ಆಸ್ಪತ್ರೆ ಎಂ.ಸಿ.ಸಿ. 'ಬ' ಬ್ಲಾಕ್, ದಾವಣಗೆರೆ. 08192-222292

**ಓದುಗರ ಗಮನಕ್ಕೆ** ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಜನಾಂದೋಲನ ಚಳವಳಿಯ ಪೋಸ್ಟರ್ ಬಿಡುಗಡೆ

ದಾವಣಗೆರೆ,ಅ.1- ಚುನಾವಣಾ ಸಂದರ್ಭದಲ್ಲಿ ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ, ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಇದೇ 4ರ ಬುಧವಾರ ಸರ್ಕಾರಕ್ಕೆ ಒತ್ತಾಯಿಸುವ ಜನಾಗ್ರಹ ಜನಾಂದೋಲನ ಚಳವಳಿಯ ಪೋಸ್ಟರ್ ಅನ್ನು ಸಿಪಿಐ ಹಿರಿಯ ಮುಖಂಡ ಹಾಗೂ ಪಕ್ಷದ ಜಿಲ್ಲಾ ಮಂಡಳಿ ಖಜಾಂಚಿ ಕಾಂ. ಆನಂದರಾಜ್ ಬಿಡುಗಡೆ ಮಾಡುವರು ಎಂದು ದಾವಣಗೆರೆ ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

2023ರ ಕರ್ನಾಟಕ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಕೊಟ್ಟ ಭರವಸೆಗಳ್ನು ಈಡೇರಿಸುವುದಾಗಿ ಜನತೆಗೆ ಹಾಗೂ ಎಲ್ಲಾ ವರ್ಗದ ದುಡಿಯುವ ಜನರಿಗೆ ಆಶಾದಾಯಕ ಭರವಸೆಗಳನ್ನು ನೀಡಿತ್ತು. ಈಗ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರ ನಡೆಸುತ್ತಿದೆ. ಆದ್ದರಿಂದ ರಾಜ್ಯದ ಜನತೆಗೆ ಮತ್ತು ಕಾರ್ಮಿಕರಿಗೆ ಕೊಟ್ಟ ಭರವಸೆಗಳ್ನು ಈಡೇರಿಸಬೇಕೆಂದು ಚಳವಳಿ ಕುರಿತು ಇರುವ ಪೋಸ್ಟರ್ ಬಿಡುಗಡೆ ಮಾಡಲಾಗುವುದು ಎಂದು ಆವರಗೆರೆ ಚಂದ್ರು ತಿಳಿಸಿದ್ದಾರೆ.

4ರಂದು ಬೆಳಿಗ್ಗೆ 11.30ಕ್ಕೆ ದಾವಣಗೆರೆ ಜಯದೇವ ಸರ್ಕಲ್ ಬಳಿ ನಡೆಯುವ ಪೋಸ್ಟರ್ ಬಿಡುಗಡೆ ಕಾರ್ಯಕ್ರಮಕ್ಕೆ ಪಕ್ಷದ ಕಾರ್ಯಕರ್ತರು ಆಗಮಿಸುವಂತೆ ಪಕ್ಷದ ಜಿಲ್ಲಾ ಮಂಡಳಿ ಸಹಕಾರ್ಯದರ್ಶಿಗಳಾದ ಕಾಂ. ಹೆಚ್.ಜಿ. ಉಮೇಶ್, ಕಾಂ. ಆವರಗೆರೆ ವಾಸು, ಮುಖಂಡರುಗಳಾದ ಎಂ.ಬಿ. ಶಾರದಮ್ಮ, ಟಿ.ಎಸ್. ನಾಗರಾಜ್, ಮಹಮ್ಮದ್ ಭಾಷಾ ಜಗಳೂರು, ಟಿ.ಹೆಚ್. ನಾಗರಾಜ ಹರಿಹರ, ಮಹಮ್ಮದ್ ರಫೀಕ್ ಚನ್ನಗಿರಿ, ಐರಣಿ ಚಂದ್ರು ಇವರು ಪಕ್ಷದ ಪರವಾಗಿ ಕೋರಿದ್ದಾರೆ.

# ಗಾಂಧೀಜಿ-ಶಾಸ್ತ್ರೀಜಿ ಆದರ್ಶಪ್ರಾಯರು, ಪ್ರಾತಃ ಸ್ಮರಣೀಯರು



## ಜಿಲ್ಲಾ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಎಸ್ಸೆಸ್ ಸ್ಮರಣೆ

ದಾವಣಗೆರೆ, ಅ. 3 - ಚಾರಿತ್ರ್ಯವಿಲ್ಲದ ಶಿಕ್ಷಣ, ದುಡಿಮೆ ಇಲ್ಲದ ಸಂಪತ್ತು, ಆತ್ಮಸಾಕ್ಷಿ ಇಲ್ಲದ ಸಂತೋಷ, ತತ್ವರಹಿತ ರಾಜಕಾರಣ, ನೀತಿ ಇಲ್ಲದ ವ್ಯಾಪಾರ, ಮಾನವೀಯತೆ ಇಲ್ಲದ ಜ್ಞಾನ, ತ್ಯಾಗವಿಲ್ಲದ ಪೂಜೆ ಇಂತಹ ಅನೇಕ ನಾಣ್ನುಡಿಗಳನ್ನು ಹೇಳಿದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ಹಮ್ಮಿಕೊಂಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧಿಜಿ ಮತ್ತು ಮಾಜಿ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಜನ್ಮ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ದೇಶದ ಪ್ರತಿಯೊಬ್ಬರ ಮನಸ್ಸಿನಲ್ಲಿ ಹಾಸು ಹೊಕ್ಕಾಗಿರುವ ಮಹಾತ್ಮ ಗಾಂಧೀಜಿ ವಿಶ್ವಕ್ಕೆ ಆದರ್ಶಪ್ರಾಯರು. ಇಂದು ಮಹಾತ್ಮ ಗಾಂಧೀಜಿಯ 154ನೇ ಜನ್ಮ ದಿನಾಚರಣೆ ಜೊತೆಗೆ ಈ ದೇಶದ 2ನೇ ಪ್ರಧಾನಿ ಹಾಗೂ ಜೈ ಜವಾನ್, ಜೈ ಕಿಸಾನ್ ಎಂಬ ಘೋಷವಾಕ್ಯ ನೀಡಿದ ಲಾಲ್ ಬಹದ್ದೂರ್ ಶಾಸ್ತ್ರೀಜಿ ಜನ್ಮದಿನವನ್ನು ದೇಶದೆಲ್ಲೆಡೆ ಆಚರಿಸುತ್ತಿರುವುದು ಸ್ವಾಗತಾರ್ಹ ಎಂದರು.

ಸ್ವಾತಂತ್ರ್ಯಕ್ಕೆ ಅಹಿಂಸಾ ಮಾರ್ಗದಲ್ಲಿ ಹೋರಾಡಿದವರು ಈ ದೇಶಕ್ಕೆ ನೀಡಿದ ಕೊಡುಗೆ, ಬೋಧನೆ, ಸ್ವಾತಂತ್ರ್ಯ ಹೋರಾಟ, ಸಾಹಿತ್ಯ ಕೊಡುಗೆ, ತತ್ವಗಳು, ಸಿದ್ಧಾಂತಗಳಿಂದಾಗಿ ಸದಾ ದೇಶದ ಎಲ್ಲ ಪ್ರಜೆಗಳಿಂದ ಸ್ಮರಿಸಲ್ಪಡುತ್ತಿದ್ದಾರೆ. ಇಂದು ಅವರ ಮಹತ್ವ, ಅವರ ಇತಿಹಾಸ, ಅವರನ್ನು ವಿಶೇಷವಾಗಿ ನೆನೆಯುವುದೇ ನಮ್ಮ ಕರ್ತವ್ಯ ಎಂದರು.

ಅನೇಕರ ಬರಹಗಳಿಂದ ಸ್ಫೂರ್ತಿ ಪಡೆದಿದ್ದ ಅವರುಗಳ ಜ್ಞಾನ , ಸತ್ಯ, ಪ್ರಾಮಾಣಿಕತೆ, ಒಳ್ಳೆಯ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡಾಗ ಅವರ ಆಸೆ ಈಡೇರಿಸುವಂತಾಗಲಿದೆ. ನಾವು ಅವರುಗಳ ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಪ್ರಜೆಗಳಾಗಿ, ಉತ್ತಮ ಮನುಷ್ಯ ರಾಗಿ, ಜೀವನದಲ್ಲಿ ಏಳಿಗೆಯನ್ನು ಖಂಡಿತ ಸುಲಭ ವಾಗಿ ಕಂಡುಕೊಳ್ಳಬಹುದು ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಘಟಕದ ಜಿಲ್ಲಾಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಬಿ.ಎಂ. ಈಶ್ವರ್ ಮಹಿಳಾ ಘಟಕದ ಮಂಜಮ್ಮ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಅಯೂಬ್ ಪೈಲ್ವಾನ್, ಪಾಲಿಕೆ ಸದಸ್ಯ ಎ. ನಾಗರಾಜ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಎಲ್.ಎಮ್.ಹೆಚ್. ಸಾಗರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಸೇವಾದಳದ ಡೋಲಿ ಚಂದ್ರು, ಜಿಲ್ಲಾಧ್ಯಕ್ಷ ಕವಿತಾ ಚಂದ್ರಶೇಖರ್, ಗೀತಾ ಪ್ರಶಾಂತ್, ಗೀತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ರಾಜೇಶ್ವರಿ, ರಾಧಾಬಾಯಿ, ಶುಭಮಂಗಳ, ಜಯಮ್ಮ, ವಿನಾಯಕ ಭೋವಿ, ಮೈನುದ್ದೀನ್, ಸದ್ದಾಂ, ರಾಕೇಶ್, ಜೊಳ್ಳಿ ಬಸವರಾಜ್, ರಘು, ರವಿ, ಯುವರಾಜ್ ಮತ್ತಿತರರಿದ್ದರು.

# ಗಾಂಧೀಜಿ ದೇಶದ ಸ್ವಾತಂತ್ರ್ಯ ಪ್ರಜ್ಞೆ, ಶಾಸ್ತ್ರೀಜಿ ದೇಶದ ಏಳಿಗೆಯ ಪ್ರಜ್ಞೆ



ದಾವಣಗೆರೆ, ಅ. 3 - ಸತ್ಯಾಗ್ರಹ ಮತ್ತು ಅಹಿಂಸೆ ಹಾಗೂ ಶಾಂತಿ ಎಂಬ ಅಸ್ತ್ರಗಳಿಂದ ಭಾರತದ ದಾಸ್ಯ ಮುಕ್ತಿಗಾಗಿ ಶ್ರಮಿಸಿದವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರಾಗಿದ್ದರು. ಸ್ವತಂತ್ರ ಭಾರತದ ಎರಡನೇ ಪ್ರಧಾನಿ ಜೈ ಜವಾನ್ ಜೈ ಕಿಸಾನ್ ಖ್ಯಾತಿಯ ಲಾಲ್ ಬಹದ್ದೂರ್ ಶಾಸ್ತ್ರಿ ಯವರು ಈ ದೇಶ ಕಂಡ ಅತ್ಯಂತ ಪ್ರಾಮಾಣಿಕ, ದೂರ ದೃಷ್ಟಿಯ ನಾಯಕರಾಗಿದ್ದರು. ಇಂತಹ ಮಹಾನ್ ಚೇತನಗಳಿಬ್ಬರು ಒಂದೇ ದಿನ ಜನ್ಮ ತಳೆದಿದ್ದು, ಇಂದು ಅವರಿರುವರ ಹುಟ್ಟು ಹಬ್ಬದ ಸುದಿನ. ಗಾಂಧಿ ಹಾಗೂ ಶಾಸ್ತ್ರೀಜಿಯವರ ಚಿಂತನೆ, ಆದರ್ಶ ಜೀವನ ಮೌಲ್ಯಗಳನ್ನು ಸ್ಮರಿಸುವ ಮತ್ತು ಅದರಂತೆ ನಡೆಯುವ ಪಣ ತೊಡುವ ದಿನವಿದು. ಗಾಂಧಿ ನಮ್ಮ ದೇಶದ ಸ್ವಾತಂತ್ರ್ಯ ಪ್ರಜ್ಞೆಯಾದರೆ ಲಾಲ್ ಬಹದ್ದೂರ್ ಶಾಸ್ತ್ರಿಗಳು ಈ ದೇಶದ ಏಳಿಗೆಯ ಪ್ರಜ್ಞೆಯಾಗಿದ್ದರು ಎಂದು ಕೆ.ಜಿ. ವೇದಮೂರ್ತಿ ಗೌಡ್ರು ಈ ಇಬ್ಬರು ಮಹಾನ್ ಚೇತನಗಳಿಗೆ ಸ್ಮರಿಸುತ್ತಾ ಗೌರವ ನಮನ ಸಲ್ಲಿಸಿದರು.

ಇಲ್ಲಿಗೆ ಸಮೀಪದ ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಗಾಂಧೀಜಿಯವರ 154ನೇ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕುರ್ಕಿ ಗ್ರಾಮದ ಹಿರಿಯರಾದ ಎ. ಮುರುಗೇಂದ್ರಪ್ಪ ಮಾತನಾಡಿ, ಅತ್ಯಂತ ಸರಳ, ಶುದ್ಧ, ಪ್ರಾಮಾಣಿಕ, ದಕ್ಷತೆಗೆ ಪ್ರತಿಬಿಂಬವೆಂಬಂತೆ ಗಾಂಧಿ ಹಾಗೂ ಶಾಸ್ತ್ರೀಯವರು ಬದುಕಿದ್ದರು. ಅವರು ನಮ್ಮೆಲ್ಲರಿಗೂ ಆದರ್ಶಪ್ರಾಯರು ಎಂದು ಅವರನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋ ಪಾಧ್ಯಾಯರಾದ ಶ್ರೀಮತಿ ಕೆ.ಬಿ. ಮೀರಾ ಅವರು ವಹಿಸಿ ವಿದ್ಯಾರ್ಥಿಗಳಿಗೆ ಗಾಂಧಿ ಹಾಗೂ ಶಾಸ್ತ್ರೀಜಿಯವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು.

ಶಿಕ್ಷಕ ಎಚ್. ವಿರೂಪಾಕ್ಷಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಕೆ. ವಿ. ಓಂಕಾರಪ್ಪ, ಗುರುಮೂರ್ತಿ ಅವರು ಕಾರ್ಯಕ್ರಮದ ಕುರಿತಾಗಿ ಮಾತನಾಡಿದರು.

ಎಸ್‌ಡಿಎಂಸಿಯ ಸದಸ್ಯ ಕೆ. ಜೆ. ನಾಗರಾಜ್, ಚೆನ್ನಪ್ಪ, ಮಂಜುನಾಥ ಸ್ವಾಮಿ ಹಾಗೂ ವರ್ಷ ಬೇಕರಿಯ ಸಿದ್ದೇಶ್, ಪ್ರಾಥಮಿಕ ಶಾಲಾ ಎಸ್‌ಡಿಎಂಸಿ ಉಪಾಧ್ಯಕ್ಷ ಗುರುಮೂರ್ತಿ, ಕೆ.ಎಂ. ಅಜ್ಜಯ್ಯ ಸ್ವಾಮಿ, ಶಿಕ್ಷಕ ಪ್ರಕಾಶ್, ನಾಗರಾಜ್ ಶಾಂತಕುಮಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕೆ. ಜೆ. ನಾಗರಾಜ್, ವರ್ಷ ಬೇಕರಿ ಮಾಲೀಕ ಸಿದ್ದೇಶ್, ಕೆ.ಎಂ. ಅಜ್ಜಯ್ಯ ಸ್ವಾಮಿ ಇವರುಗಳು ಶಾಲೆಗೆ ಸ್ಕ್ರೀನ್ ಕೊಡುಗೆಯಾಗಿ ನೀಡಿದರು.

ಅಧ್ಯಾಪಕ ಸಿ.ಜಿ. ಜಗದೀಶ್ ಕೂಲಂಬಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಿಕ್ಷಕಿ ಶಕುಂತಲಾ ವಂದಿಸಿದರು. ದೈಹಿಕ ಶಿಕ್ಷಕ ರಾಘವೇಂದ್ರ ನಿರೂಪಿಸಿದರು.

## ದಾಂಡಿಯಾ ರಾಸ್ : ಪೋಸ್ಟರ್ ಬಿಡುಗಡೆ




ದಾವಣಗೆರೆ ಅ. 3 - ರಿದ್ಧಿ ಸಿದ್ಧಿ ಫೌಂಡೇಶನ್ ಮತ್ತು ಆರ್ ಜೆ. ಇವೆಂಟ್ ಇವರ ಆಶ್ರಯದಲ್ಲಿ 16 ನೇ ವರ್ಷದ ನವರಾತ್ರಿ ದಸರಾ ಹಬ್ಬದ ಪ್ರಯುಕ್ತ ಭಾರತೀಯ ಸಂಪ್ರದಾಯದಂತೆ 'ದಾಂಡಿಯಾ ರಾಸ್' ಕಾರ್ಯಕ್ರಮವು ಇದೇ ದಿನಾಂಕ 21 ಮತ್ತು 22 ರಂದು ನಗರದ ರೇಣುಕಾ ಮಂದಿರದಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದ ಪೋಸ್ಟರ್ ಅನ್ನು ಶಾಸಕ ಶಾಮನೂರು ಶಿವಶಂಕರಪ್ಪ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ದಿನೇಶ್. ಕೆ. ಶೆಟ್ಟಿ, ರಿದ್ದಿ ಸಿದ್ದಿ ಫೌಂಡೇಶನ್ ಕಾರ್ಯದರ್ಶಿ ರಾಜು ಭಂಡಾರಿ, ಶ್ರೀಕಾಂತ್ ಬಗರೆ, ನಫೀಜ್ ಶೇಖ್, ಅಶೋಕ. ವಿ. ಜೈನ್, ರೋನಕ ಜೈನ್ ಮತ್ತು ಇನ್ನಿತರರು ಉಪಸ್ಥಿತರಿದ್ದರು.

# ಚಿಗಟೇರಿ ಜಿಲ್ಲಾಸ್ಪತ್ರೆಯ ರಾಯಚೂರು ಏಜೆನ್ಸಿಯ ಗುತ್ತಿಗೆ ರದ್ದುಪಡಿಸಲು ಆಗ್ರಹ



ದಾವಣಗೆರೆ, ಅ.3- ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯ ಡಿ ಗ್ರೂಪ್ ಮತ್ತು ನಾನ್ ಕ್ಲಿನಿಕಲ್ ಸ್ವಚ್ಛತಾ ಕಾರ್ಯದ ಹೊರ ಗುತ್ತಿಗೆ ಪಡೆದಿರುವ ರಾಯಚೂರಿನ ದೀಕ್ಷಾ ಕನ್ಸಲ್ಟೆನ್ಸಿ ಏಜೆನ್ಸಿ ಗುತ್ತಿಗೆ ರದ್ದು ಪಡಿಸುವಂತೆ ಇಂದು ಡಾ.ಬಿ.ಆರ್. ಅಂಬೇಡ್ಕರ್ ರಾಜ್ಯ ಸರ್ಕಾರಿ ಆಸ್ಪತ್ರೆಗಳ ಗುತ್ತಿಗೆ ನೌಕರರ ಹಾಗೂ ಇತರೆ ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ದೀಕ್ಷಾ ಏಜೆನ್ಸಿಯು ಸಬ್ ಲೀಜ್ ನೀಡುವ ಮೂಲಕ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಕಾರ್ಮಿಕರ ನೇಮಕಾತಿ ಹಾಗೂ ವೇತನ ನೀಡುವ ವಿಚಾರದಲ್ಲಿ ಭ್ರಷ್ಟಾಚಾರ ಎಸಗಿದೆ. ಈ ಏಜೆನ್ಸಿಯ ಸಬ್ ಗುತ್ತಿಗೆದಾರರಿಗೆ ಜಿಲ್ಲಾಸ್ಪತ್ರೆಯ ಕೆಲವೊಂದು ಅಧಿಕಾರಿಗಳು ಸಹಕರಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಡಿ. ಹನುಮಂತಪ್ಪ, ಎಂ.ತಿಪ್ಪೇರುದ್ರಪ್ಪ, ಮನೋಜ್ ಆರ್., ಚಂದ್ರಪ್ಪ ಎಂ., ಮಂಜುನಾಥ, ಅಂಬರೀಶ್, ಯಶವಂತ, ರಮೇಶ್, ಮಾರುತಿ, ಹರೀಶ್, ಪ್ರಶಾಂತ, ಮಹಾಂತೇಶ್, ಸಿದ್ದೇಶ್, ಜಯಮ್ಮ, ಅನಸೂಯಮ್ಮ, ರಂಗಪ್ಪ, ಉಚ್ಚೆಂಗಪ್ಪ, ಸುಜಾತ, ಕೆಂಚಪ್ಪ ಇತರರು ಇದ್ದರು.

# ಕನ್ನಡ-ಕನ್ನಡಿಗ-ಕರ್ನಾಟಕದ ಕಥೆ-ವ್ಯಥೆ

**ಓದುಗರ ಪತ್ರ**

**ಮಾನ್ಯರೇ,**

ಕನ್ನಡ-ಕನ್ನಡಿಗ-ಕರ್ನಾಟಕ ಇವುಗಳಿಗೆ ಸಂಬಂಧಿಸಿದಂತೆ ಜಲ ಸಂಪನ್ಮೂಲದ ಬಳಕೆ, ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಬಳಕೆ, ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ, ಉದ್ಯೋಗ ವ್ಯವಸ್ಥೆಗಳು ಮುಂತಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗಳ ಸರಪಳಿಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ನಿಮ್ಮ ತೀವ್ರ ಅವಗಾಹನೆಗೆಂದು ತಿಳಿಸಲಿಚ್ಛಿಸುತ್ತೇನೆ.

ಪ್ರಸ್ತುತ ಕನ್ನಡ ನಾಡಿಗೆ ಕಗ್ಗಂಟಾಗಿ ಪರಿಣಮಿಸಿರುವ ಕಾವೇರಿ ನದಿ ನೀರಿನ ಸಮಸ್ಯೆ, ಕರ್ನಾಟಕದ ಬಹುಪಾಲು ಜನತೆಯ ಕುಡಿಯುವ ನೀರಿನ ಮತ್ತು ವ್ಯವಸಾಯ ಕ್ಷೇತ್ರದ ಬಹುಮಟ್ಟಿನ ಅಗತ್ಯಗಳನ್ನು ಪೂರೈಸುವ ಕಾವೇರಿ ನದಿಯು ಕರ್ನಾಟಕದ ಜೀವನದಿ, ಕಾವೇರಿ ನೀರು ತಮಿಳುನಾಡಿನ ಅಗತ್ಯಗಳಿಗೂ ಪೂರಕವಾಗಿದೆ ಎಂಬುದು ನಿಜ, ಆದರೆ ಈ ಎರಡೂ ರಾಜ್ಯಗಳ ಬೇಡಿಕೆಗಳಿಗೆ ಸ್ಪಂದಿಸುವ ಆಶಯದಲ್ಲಿ ಕರ್ನಾಟಕಕ್ಕೆ ಅಪಾರ ಅನ್ಯಾಯವಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ, ಮಳೆಗಾಲದಲ್ಲಿ ಅಗಾಧ ಪ್ರಮಾಣದಲ್ಲಿ ಸಾಗರಕ್ಕೆ ಹರಿದು ಹೋಗುವ ಕಾವೇರಿಯ ನೀರನ್ನು ಶೇಖರಿಸಿಟ್ಟು, ಅದನ್ನು ಮಳೆಗಾಲದ ನಂತರ ಬಳಸಿಕೊಳ್ಳುವ ಅತ್ಯಂತ ಸಮರ್ಪಕವಾದ ಉದ್ದೇಶದಿಂದ ಕರ್ನಾಟಕದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ,

ಇದನ್ನು ತಮಿಳುನಾಡು ಅರ್ಥ ಮಾಡಿಕೊಳ್ಳಬೇಕು, ತಮಿಳುನಾಡಿನಲ್ಲೂ ಹಲವಾರು ಜಲಾಶಯಗಳನ್ನು ನಿರ್ಮಿಸಿ ಮಳೆಗಾಲದಲ್ಲಿ ಆ ರಾಜ್ಯದ ಮೂಲಕ ಹಾದುಹೋಗುವ ಕಾವೇರಿ ಜಲರಾಶಿಯನ್ನು ಹಿಡಿದಿಟ್ಟುಕೊಂಡು ಮುಂದೆ ಬಳಸಿಕೊಳ್ಳುವುದು ಸೂಕ್ತವಾದ ಕ್ರಮವಾಗಿರುತ್ತದೆ. ಇದು ಆ ರಾಜ್ಯದ ನೀರಿನ ಅವಶ್ಯಕತೆಗಳನ್ನು ಪೂರೈಸುತ್ತದೆ. ಅಲ್ಲದೆ ಇದರಿಂದ ಆ ರಾಜ್ಯದಲ್ಲಿನ ಅಂತರ್ಜಲದ ಮಟ್ಟವು ಹೆಚ್ಚಾಗುತ್ತದೆ, ಇಂತಹ ಕಾರ್ಯಕ್ರಮಗಳಿಗೆ ಯಾವ ರೀತಿಯ ಅಡ್ಡಿ, ಆತಂಕಗಳು ಇರುವುದಿಲ್ಲ. ಆದರೆ ಕರ್ನಾಟಕದ ಜಲಾಶಯಗಳಲ್ಲಿ ಶೇಖರವಾಗುವ ಬಹುಪಾಲು ನೀರನ್ನು ತಮಗಾಗಿಯೇ ಮೀಸಲಾಗಿಟ್ಟು ಮಳೆಗಾಲದ ನಂತರ ತಮಗೆ ನೀಡಬೇಕೆಂದು ಸರ್ವವಿಧದ ಒತ್ತಡ ಹೇರುತ್ತಿರುವುದು ಅತ್ಯಂತ ದುರದೃಷ್ಟಕರ, ಈ ಒತ್ತಡಕ್ಕೆ ಮಣಿಯುವ ಕೇಂದ್ರ ಸರ್ಕಾರ ಹಾಗೂ ಎಲ್ಲಾ ರೀತಿಯ ನ್ಯಾಯ ಪಂಚಾಯಿತಿಗಳು ಕರ್ನಾಟಕಕ್ಕೆ ತೀವ್ರ ಅನ್ಯಾಯವನ್ನು ಎಸಗುತ್ತಿರುವುದು ಜಗಜ್ಜಾಹೀರಾಗಿದೆ,

ನಮ್ಮ ಮನೆಯಲ್ಲಿ ನಾವು ಉಪವಾಸವಿದ್ದು ಇತರರಿಗೆ ಭೂರಿ ಭೋಜನ ನೀಡಬೇಕಾದಂತಹ ದಬ್ಬಾಳಿಕೆಗೆ ಈಡಾಗಿರುವುದು ಕಂಡು ಕೇಳರಿಯದ ಅನ್ಯಾಯದ ಸಂಗತಿ ಅಲ್ಲವೇ ? ಇಂತಹ ಕರ್ನಾಟಕ ವಿರೋಧಿ ಹಾಗೂ ಕರ್ನಾಟಕದ ಅಸ್ತಿತ್ವವೇ ಇಲ್ಲದಂತಾಗುವ ಬೆಳವಣಿಗೆಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಾಣುತ್ತಿದ್ದೇವೆ, ಈ ಮಹತ್ತರವಾದ ಅನ್ಯಾಯಗಳನ್ನು ಅತ್ಯಂತ ಕಟುವಾಗಿ, ಬಲವಾಗಿ ಖಂಡಿಸಿ ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಎಂಬ ವಿಷಯಾಧಾರಿತವಾಗಿ ಎಲ್ಲರೂ ತಮ್ಮ ತಮ್ಮಲ್ಲಿನ ಉಳಿದ ವ್ಯತ್ಯಾಸಗಳನ್ನು ಮರೆತು ಪ್ರಪ್ರಥಮವಾಗಿ ಈ ಬಗ್ಗೆ ತಮ್ಮ ಗಮನವನ್ನು ನೀಡಬೇಕಾಗಿದೆ, ಎಲ್ಲರೂ ಈ ದಿಕ್ಕಿನಲ್ಲಿ ಶ್ರಮಿಸಬೇಕಾಗಿದೆ,

**- ಜೆಂಬಿಗಿ ಮೃತ್ಯುಂಜಯ, ದಾವಣಗೆರೆ.**

# ದೇಶ ಸೇವೆಗೆ ತಮ್ಮ ಬದುಕನ್ನು ಗಂಧದಂತೆ ತೇಯ್ದ ಶಾಸ್ತ್ರೀಜಿ



## ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಶ್ಲಾಘನೆ

ದಾವಣಗೆರೆ, ಅ.3- ಅಂದು ಮಹಾತ್ಮಗಾಂಧೀಜಿಯವರನ್ನು ಅಮಾನುಷವಾಗಿ ಕೊಲೆಗೈದಂತಹ ನಾಥೂರಾಮ್ ಗೋಡ್ಸೆ ಹಿಂಬಾಲಕರ ಕೈಯ್ಯಲ್ಲಿ ಇಂದು ದೇಶದ ಆಡಳಿತವಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯ ವಕ್ತಾರ ಡಿ. ಬಸವರಾಜ್ ಆತಂಕ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದಿಂದ ಏರ್ಪಡಿಸಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜನ್ಮದಿನಾಚರಣೆ ಸಮಾರಂಭದಲ್ಲಿ ಮಹಾತ್ಮರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಜೀವನದುದ್ದಕ್ಕೂ ಶಾಂತಿ ಪ್ರತಿಪಾದಿಸಿದ ಮಹಾತ್ಮ ಗಾಂಧೀಜಿಯವರು ದೇಶದ ಸ್ವಾತಂತ್ರ್ಯದ ನಂತರ ರಾಮ ರಾಜ್ಯದ ಕನಸು ಕಂಡಿದ್ದರು. ಗಾಂಧೀಜಿಯವರ ಪ್ರಕಾರ ರಾಮ ರಾಜ್ಯವೆಂದರೆ ಸರ್ವ ಧರ್ಮಗಳನ್ನು ಸಮಾನವಾಗಿ ಗೌರವಿಸುವ ಸಮಸಮಾಜ ಮತ್ತು ಸಮಾನತೆ ಸಾರುವ ರಾಮರಾಜ್ಯವಾಗಿತ್ತು. ಆದರೆ, ಕಳೆದ ಒಂಬತ್ತು ವರ್ಷಗಳಿಂದ ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಮ ರಾಜ್ಯದ ಬದಲಾಗಿ ರಾವಣ ರಾಜ್ಯವನ್ನು ನಡೆಸುತ್ತಿದ್ದಾರೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಇತ್ತೀಚಿನ ದಿನಮಾನಗಳಲ್ಲಿ ಮಣಿಪುರ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದ ಬೆತ್ತಲೆ ಮೆರವಣಿಗೆ, ಅತ್ಯಾಚಾರ, ಕೊಲೆಗಳೇ ಸಾಕ್ಷಿಯಾಗಿವೆ ಎಂದು ಕಿಡಿ ಕಾರಿದರು.

ದೇಶದ ಬಡತನವನ್ನು ಕಣ್ಣಾರೇ ಕಂಡು ಸರಳ ಜೀವನ ನಡೆಸಿದ ಮಹಾತ್ಮ ಗಾಂಧೀಜಿ ಭಾರತೀಯರಿಗೆ ಆದರ್ಶರಾಗಿದ್ದಾರೆ. 10 ಲಕ್ಷ ರೂಪಾಯಿಗಳ ಸೂಟು ಬೂಟು ತೊಟ್ಟು ದಿನಕ್ಕೊಂದು ವೇಷಭೂಷಣ ಧರಿಸುವವರಲ್ಲ ಎಂದು ಪರೋಕ್ಷವಾಗಿ ನರೇಂದ್ರ ಮೋದಿಯವರನ್ನು ಲೇವಡಿ ಮಾಡಿದರು.

ಕೋಮುವಾದಿಗಳು ಗಾಂಧೀಜಿಯವರನ್ನು ಕೊಂದಿರಬಹುದು, ಆದರೆ ಗಾಂಧೀಜಿಯವರ ಆದರ್ಶಗಳನ್ನಲ್ಲ ಎಂದು ಅವರು ಹೇಳಿದರು.

ದೇಶದ ಎರಡನೇ ಪ್ರಧಾನಮಂತ್ರಿಗಳಾಗಿ ಸೇವೆ ಸಲ್ಲಿಸಿದ ಭಾರತ ರತ್ನ ಲಾಲ್ ಬಹದ್ದೂರ್ ಶಾಸ್ತ್ರಿ, ದೇಶ ಕಂಡ ಅಪ್ರತಿಮ ನಾಯಕರಾಗಿದ್ದರು. ದಕ್ಷತೆ, ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿದ್ದ ಅವರು, ತಾವು ನಂಬಿದ ತತ್ವ, ಆದರ್ಶಗಳಿಗಾಗಿ ತಮ್ಮ ಬದುಕನ್ನು ಗಂಧದ ಕೊರಡಿನಂತೆ ತೆಯ್ದು, ಶಾಸ್ತ್ರಿಯವರು ದೇಶಕ್ಕೆ ಅನನ್ಯ ಸೇವೆ ಸಲ್ಲಿಸಿದ್ದಾರೆ ಎಂದು ಡಿ. ಬಸವರಾಜ್ ಶಾಸ್ತ್ರಿಯವರನ್ನು ಕೊಂಡಾಡಿದರು, ದೇಶಕ್ಕೆ ಅವರು ಅನನ್ಯ ಸೇವೆ ಸಲ್ಲಿಸಿದ್ದಾರೆಂದು ಸ್ಮರಿಸಿದರು

ಹೊಟ್ಟೆಗೆ ಅನ್ನ ನೀಡುವ ರೈತ, ದೇಶ ಕಾಯುವ ಯೋಧರಿಬ್ಬರೂ ದೇಶದ ಬೆನ್ನೆಲುಬು ಎಂದು ನಂಬಿಕೊಂಡಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು 'ಜೈ ಜವಾನ್, ಜೈ ಕಿಸಾನ್' ಘೋಷಣೆಯನ್ನು ಮೊಳಗಿಸಿದರು. ಈ ಘೋಷಣೆ ಇಂದಿಗೂ ಪ್ರಸಿದ್ಧಿ ಪಡೆದಿದೆ. ಭಾರತ ಸರ್ಕಾರದಲ್ಲಿ ಅತ್ಯುನ್ನತ ಪ್ರಧಾನ ಮಂತ್ರಿ ಹುದ್ದೆಯನ್ನು ಹೊಂದಿದ್ದರೂ ಸಹ ಅವರ ಬಳಿ ಸ್ವಂತ ಕಾರು ಇರಲಿಲ್ಲ, ಸ್ವಂತ ಮನೆಯೂ ಇರಲಿಲ್ಲ, ಅವರೊಬ್ಬ ಸ್ವಾಭಿಮಾನಿ ಪ್ರಾಮಾಣಿಕ ನಾಯಕರಾಗಿದ್ದರು.

ಹನ್ನೆರಡು ಸಾವಿರ ರೂ.ಗಳ ಫಿಯೆಟ್ ಕಾರನ್ನು ಕೊಳ್ಳಲು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಐದು ಸಾವಿರ ರೂಪಾಯಿ ಸಾಲ ಪಡೆದಿದ್ದರು. ಇಂತಹ ಪ್ರಾಮಾಣಿಕ ನಾಯಕರು ಇದ್ದದ್ದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ ಎಂದು ಬಸವರಾಜ್ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದ ಅಧ್ಯಕ್ಷ ಕೆ.ಎಂ. ಮಂಜು ನಾಥ್, ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಕೆ.ಜಿ. ರಹಮತ್‌ವುಲ್ಲಾ, ಎಂ. ಕೆ. ಲಿಯಾಖತ್ ಅಲಿ, ಡಿ. ಶಿವಕುಮಾರ್, ಬಿ.ಎಚ್. ಉದಯ್ ಕುಮಾರ್, ಜಿ.ಎಲ್. ಶಿವಪ್ರಕಾಶ್, ಬಿ.ಎಸ್. ಸುರೇಶ್, ಎಸ್. ಅಂಜನಪ್ಪ, ಕೆ.ಬಿ. ಮಲ್ಲಿಕಾರ್ಜುನ್, ನವೀನ್ ಕುಮಾರ್, ಹರೀಶ್, ಮೊಹಮದ್ ಜಿಕ್ರಿಯ, ಮಂಜುನಾಥ್, ಮುಬಾರಕ್ ಸೇರಿದಂತೆ ಇತರರು ಹಾಜರಿದ್ದರು.

## ಆರ್.ಜಿ. ಇನ್‌ಸ್ಟಿಟ್ಯೂಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ಅ.3- ಆರ್.ಜಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಎನ್.ಎಸ್.ಎಸ್ ಘಟಕದಿಂದ ಗಾಂಧಿ ಜಯಂತಿ ಅಂಗವಾಗಿ ಸೋಮವಾರ ಸ್ವಚ್ಛತಾ ಕಾರ್ಯಕ್ರಮವನ್ನು ಕಾಲೇಜಿನ ಆವರಣ ಮತ್ತು ಬಡಾವಣೆಯ ವಿವಿಧ ಸ್ಥಳಗಳಲ್ಲಿ ಆಯೋಜಿಸಲಾಗಿತ್ತು.

ಆರ್.ಜಿ. ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ವೇತಾ ಆರ್.ಗಾಂಧಿ, ಶೈಕ್ಷಣಿಕ ನಿರ್ದೇಶಕ ಶಿವಪ್ರಕಾಶ್, ಆಡಳಿತ ವಿಭಾಗಾಧಿಕಾರಿ ಶ್ರೀಮತಿ ಬಿಂದು ಖೋನಾ, ಪ್ರಾಚಾರ್ಯರಾದ ಜಿ.ಕೆ. ಗೀತಾ, ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಎಲ್.ಎಂ. ಶರಣಕುಮಾರ, ಇತರರು ಉಪಸ್ಥಿತರಿದ್ದರು.

## ಹೈಕೋರ್ಟ್ ಎದುರು ಬೇಷರತ್ ಕ್ಷಮೆ ಯಾಚಿಸಿದ ಗೆಹ್ಲೋಟ್

ಜೈಪುರ, ಅ. 3 – ನ್ಯಾಯಾಲಯದಲ್ಲಿ ವ್ಯಾಪಕ ಭ್ರಷ್ಟಾಚಾರವಿದೆ ಎಂದು ಹೇಳಿದ್ದ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಹೈ ಕೋರ್ಟ್ ಎದುರು ಬೇಷರತ್ ಕ್ಷಮೆ ಯಾಚಿಸಿದ್ದಾರೆ.

ಗೆಹ್ಲೋಟ್ ಹೇಳಿಕೆ ವಿವಾದಕ್ಕೆ ಕಾರಣವಾದ ನಂತರ, ವಕೀಲರೊಬ್ಬರು ಅವರ ವಿರುದ್ಧ ಅರ್ಜಿ ದಾಖಲಿಸಿದ್ದರು.

ಕೆಲ ನ್ಯಾಯಮೂರ್ತಿಗಳು ವಕೀಲರು ಬರೆದು ಕೊಟ್ಟ ತೀರ್ಪುಗಳನ್ನು ಓದುತ್ತಿದ್ದಾರೆ. ನ್ಯಾಯಾಂಗದಲ್ಲಿ ವ್ಯಾಪಕ ಭ್ರಷ್ಟಾಚಾರ ಇದೆ ಎಂದು ಗೆಹ್ಲೋಟ್ ಹೇಳಿದ್ದರು.

ಗೆಹ್ಲೋಟ್ ಕ್ಷಮಾಯಾಚನಾ ಅರ್ಜಿ ದಾಖಲಿಸಿದ ನಂತರ ನ್ಯಾಯಮೂರ್ತಿಗಳಾದ ಎಂ. ಎಂ. ಶ್ರೀವಾಸ್ತವ ಹಾಗೂ ಪ್ರವೀರ್ ಭಟ್ನಾಗರ್ ಅವರನ್ನು ಒಳಗೊಂಡ ಪೀಠ ಮುಂದಿನ ವಿಚಾರಣೆಯನ್ನು ನವೆಂಬರ್ 7ಕ್ಕೆ ನಿಗದಿ ಪಡಿಸಿದೆ.

## ವಿಕಲಚೇತನ ವಧು-ವರರ ಸಮಾವೇಶ

ದಾವಣಗೆರೆ, ಅ. 3 - ಯಲಬುರ್ಗಾದ ಶ್ರೀ ವೀರಭದ್ರೇಶ್ವರ ವಿಕಲ ಚೇತನರ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ ಯಿಂದ ವಿಕಲಚೇತನ ವಧು-ವರರ ಸಭೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9611282394.

**ಅಂಜುಂ ಎಜುಕೇಷನ್ ಸೊಸೈಟಿ (ರಿ.) ದಾವಣಗೆರೆ.**

ರಿಜಿಸ್ಟರ್ ನಂ.41/80–81

**ಖಾಲಿ ಹುದ್ದೆ ನೇಮಕಾತಿ ಪ್ರಕಟಣೆ**

ಉಲ್ಲೇಖ: ಮಾನ್ಯ ನಿರ್ದೇಶಕರು(ಪ್ರೌಢಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ಬೆಂಗಳೂರುರವರ ಅನುಮತಿ ಸಂ.ಸಿ8(3) ಖಾ ಹು ಭ ಅ E 1083215/2023–24, ದಿನಾಂಕ : 26–9–2023.

ಸದರಿ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಮುಸ್ಲಿಂ ಮತೀಯ ಅಲ್ಪಸಂಖ್ಯಾತ ಅನುದಾನಿತ ಅಂಜುಂ ಪ್ರೌಢಶಾಲೆಯಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗೆ ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಯೋಮಿತಿ ಮತ್ತು ವೇತನವು ಸರ್ಕಾರಿ ಆದೇಶ ಮತ್ತು ಇಲಾಖೆ ನಿಯಮಾನುಸಾರವಾಗಿರುತ್ತದೆ.

**ಹುದ್ದೆಯ ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ. | ಶಾಲೆಯ ಹೆಸರು | ಅನುಮತಿಸಿದ ವಿಷಯ | ಖಾಲಿ ಹುದ್ದೆ | ವಿದ್ಯಾರ್ಹತೆ |
|---|---|---|---|---|
| 01. | ಅಂಜುಂ ಉರ್ದು ಮತ್ತು ಕನ್ನಡ ಮಾಧ್ಯಮ ಪ್ರೌಢಶಾಲೆ, ಭಗತ್ ಸಿಂಗ್ ನಗರ, ದಾವಣಗೆರೆ ತಾ॥ ಮತ್ತು ಜಿಲ್ಲೆ. | ಆಂಗ್ಲ ಭಾಷೆ | 01 | B.A.,B.Ed. (ಇಂಗ್ಲಿಷ್ ಐಚ್ಛಿಕ) ಉತ್ತೀರ್ಣ |

ಅರ್ಹ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಪೂರ್ಣ ಮಾಹಿತಿಗಳೊಂದಿಗೆ ಜಾಹೀರಾತು ನೀಡಿದ 21 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ತದನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಮತೀಯ ಅಲ್ಪಸಂಖ್ಯಾತ ಶಾಲೆ ಆಗಿರುವುದರಿಂದ ಮೀಸಲಾತಿ ಅನ್ವಯಿಸುವುದಿಲ್ಲ. ಅಭ್ಯರ್ಥಿಗಳು ರೂ.2,000/– ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದ ಮೂಲ ಡಿ.ಡಿ.ಯನ್ನು ಲಗತ್ತಿಸಿ ಕಾರ್ಯದರ್ಶಿಗಳು ಅಂಜುಂ ಎಜುಕೇಷನ್ ಸೊಸೈಟಿ (ರಿ.), ಭಗತ್ ಸಿಂಗ್ ನಗರ, ದಾವಣಗೆರೆ–577002, ದಾವಣಗೆರೆ ಜಿಲ್ಲೆ ಇವರಿಗೆ ಕಳುಹಿಸಬೇಕು. ಮತ್ತು ಅರ್ಜಿಯ ಪ್ರತಿಯೊಂದನ್ನು ಮಾನ್ಯ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು. ಸಂದರ್ಶನ ದಿನಾಂಕವನ್ನು ಮುಂದೆ ತಿಳಿಸಲಾಗುವುದು. ಅರ್ಜಿಯೊಂದಿಗೆ ಸಂಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ ನಮೂದಿಸಲು ಸೂಚಿಸಿದೆ.ಅಪೂರ್ಣ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

ಸಹಿ/– ಕಾರ್ಯದರ್ಶಿಗಳು,
ಸ್ಥಳ : ದಾವಣಗೆರೆ ದಿನಾಂಕ : 03–10–2023 ಅಂಜುಂ ಎಜುಕೇಷನ್ ಸೊಸೈಟಿ (ರಿ.), ದಾವಣಗೆರೆ.

# ರಾಜ್ಯದ ಜಾತಿ ಗಣತಿ ವರದಿ ಬಿಡುಗಡೆಗೆ ಮೊಯ್ಲಿ ಒತ್ತಾಯ

ಬೆಂಗಳೂರು, ಅ. 3 – ರಾಜ್ಯದಲ್ಲಿ ನಡೆಸಲಾದ ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕ ಎಂ. ವೀರಪ್ಪ ಮೊಯ್ಲಿ ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹೆಚ್. ಕಾಂತರಾಜ್ ಅವರ ಅಧ್ಯಕ್ಷತೆಯ ಆಗಿನ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಜಾತಿ ಗಣತಿ ನಡೆಸಿತ್ತು ಎಂದು ಮೊಯ್ಲಿ ಹೇಳಿದ್ದಾರೆ. ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೂ ವರದಿ ಬಿಡುಗಡೆ ಮಾಡಲಿಲ್ಲ ಎಂದು ಕಾಂಗ್ರೆಸ್ ನಾಯಕ ಹೇಳಿದ್ದಾರೆ. ಸರ್ಕಾರ ಜಾತಿ ಗಣತಿ ವರದಿ ಬಿಡುಗಡೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ನ್ಯೂಸ್‌ಕ್ಲಿಕ್‌ನ ಇಬ್ಬರ ಬಂಧನ

ನವದೆಹಲಿ, ಅ. 3 – ನ್ಯೂಸ್ ಕ್ಲಿಕ್ ಪೋರ್ಟಲ್‌ನ ವಿದೇಶಿ ಹೂಡಿಕೆ ಕುರಿತು ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರು, ನ್ಯೂಸ್ ಕ್ಲಿಕ್ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

ಆನ್‌ಲೈನ್ ಪೋರ್ಟಲ್‌ಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಈ ಹಿಂದೆ 30 ತಾಣಗಳಲ್ಲಿ ಶೋಧ ನಡೆಸಿದ್ದರು. ಚೀನಾ ಪರ ಪ್ರಚಾರ ನಡೆಸಲು ಹಣ ಪಡೆದ ಆರೋಪದ ಮೇಲೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಲಿಂ.ಶ್ರೀಗಳ ಶ್ರದ್ಧಾಂಜಲಿ ಯಶಸ್ಸಿಗೆ ಶ್ರಮಿಸಿದವರಿಗೆ ಅಭಿನಂದನೆ

### ಕೃಷಿ ವಿಜ್ಞಾನಿಗಳೊಂದಿಗೆ ಸಿರಿಗೆರೆಯ ರೈತರ ಸಂವಾದ



ಸಿರಿಗೆರೆ, ಅ.3- ಸಿರಿಗೆರೆಯ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಲಿಂ. ಶಿವಕುಮಾರ ಶ್ರೀಗಳ ಶ್ರದ್ಧಾಂಜಲಿಯ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭ ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ರೈತರ ಸಂವಾದ ಕಾರ್ಯಕ್ರಮವು ತರಳಬಾಳು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಿನ್ನೆ ಜರುಗಿತು.

ಲಿಂ. ಶಿವಕುಮಾರ ಶ್ರೀಗಳ ಶ್ರದ್ಧಾಂಜಲಿಯ ಯಶಸ್ಸಿಗೆ ಸೇವೆ ಸಲ್ಲಿಸಿದ ಎಲ್ಲಾ ಕಾರ್ಯಕರ್ತರಿಗೂ, ಹೆಚ್ಚಿನ ಮಟ್ಟದಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸಿದ ಹಾಗೂ ಶ್ರೀಗಳ ಮೇಲಿನ ಭಕ್ತಿ, ಶ್ರದ್ಧೆ, ಕೃತಜ್ಞತೆಗೆ ಭಕ್ತಿ ಸಮರ್ಪಿಸಿದ ಭಕ್ತಾದಿಗಳಿಗೆ ಶ್ರೀಗಳು ಅಭಿನಂದನೆ ಸಲ್ಲಿಸಿದರು.

ಬೆಂಗಳೂರಿನ ಕೃಷಿ ವಿಜ್ಞಾನಿಗಳಾದ ಹಾಗೂ ಏರೋಬಿಕ್ ಭತ್ತದ ತಜ್ಞ ಎಂದೇ ಪ್ರಖ್ಯಾತಿ ಪಡೆದ ಪ್ರೊ. ಹೆಚ್.ಇ.ಶಶಿಧರ್ ಮಾತನಾಡಿ, ಕಡಿಮೆ ನೀರಿನಲ್ಲಿ ಏರೋಬಿಕ್ ಭತ್ತದ ಬೆಳೆ ಬೆಳೆಯುವ ತಳಿ ಅಭಿವೃದ್ಧಿಪಡಿಸಿರುವ ತಳಿ ಏರೋಬಿಕ್ ಭತ್ತದ ತಳಿಯಾಗಿದೆ.

ಒಂದು ಕೆಜಿ ಭತ್ತ ಬೆಳೆಯಲು ಸಾಮಾನ್ಯವಾಗಿ 5,000 ಲಿ. ನೀರಿನ ಅವಶ್ಯಕತೆ ಇರುತ್ತದೆ. ಆದರೆ ನಾವು ಅಭಿವೃದ್ಧಿಪಡಿಸುವ ಭತ್ತದ ತಳಿಯಲ್ಲಿ ಭತ್ತ ಬೆಳೆಯಲು ಕೇವಲ 500 ರಿಂದ 2000 ಲಿ. ನೀರು ಮಾತ್ರ ಸಾಕಾಗುತ್ತದೆ. ಇದರಿಂದ ನೀರಿನ ಪ್ರಮಾಣ ಉಳಿತಾಯವಾಗುತ್ತದೆ. ಬೇರು ಆಳ ಇದ್ದಷ್ಟು ನೀರಿನ ಅವಶ್ಯಕತೆ ಕಡಿಮೆಯಾಗುತ್ತಾ ಹೋಗುತ್ತದೆ. ಬೇರುಗಳು ಮೇಲ್ಪದರದಲ್ಲಿ ಇದ್ದರೆ ಹೆಚ್ಚು ನೀರಿನ ಅವಶ್ಯಕತೆ ಇರುತ್ತದೆ ಎಂದರು.

ಒಂದು ಎಕರೆಯಲ್ಲಿ ಭತ್ತ ಬೆಳೆಯಲು 10 ರಿಂದ 13 ಸಾವಿರ ಖರ್ಚು ಬರುತ್ತದೆ. ಭತ್ತ ಬೆಳೆಯಲು ಸೂರ್ಯನ ಕಿರಣ ಅತಿ ಮುಖ್ಯ. ರಾಸಾಯನಿಕ ಗೊಬ್ಬರಗಳನ್ನು ಬಳಸದೆ ಜಾನುವಾರುಗಳ, ಕುರಿ, ಕೋಳಿ ಗೊಬ್ಬರಗಳ ಜೊತೆಗೆ ಭೂಮಿಯಲ್ಲಿರುವ ಸೂಕ್ಷ್ಮಾಣು ಜೀವಿಗಳನ್ನು ಸಹ ನಾವು ಸಾಕಬೇಕಿದೆ. ಇದರಿಂದ ರೈತರು ಅನೇಕ ಉಪಯೋಗಗಳನ್ನು ಪಡೆಯಬಹುದಾಗಿದೆ. ಎಂದರು.

ಶ್ರೀಗಳ ಆಶಯದಂತೆ ಎಲ್ಲಾ ರೈತರಿಗೆ ಅನುಕೂಲವಾಗಲು ಶಾಂತಿವನದಲ್ಲಿ ಪ್ರಾಯೋಗಿಕವಾಗಿ ಹನಿ ನೀರಾವರಿ ಮೂಲಕ ಒಂದು ಎಕರೆಯಲ್ಲಿ ಏರೋಬಿಕ್ ಭತ್ತದ ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಅದಕ್ಕಾಗಿ ಈಗಾಗಲೇ ಸೂಕ್ತ ಸ್ಥಳವನ್ನು ನಿಗದಿ ಮಾಡಲಾಗಿದೆ. ಒಂದು ವಾರದ ಒಳಗೆ ಬಿತ್ತನೆ ಕಾರ್ಯ ಜರುಗಲಿದೆ.

ದುಬೈನ ಅಬುದಾಬಿಯ ಮರು ಭೂಮಿಯಲ್ಲಿಯೂ ಸಹ ಭತ್ತ ಬೆಳೆದು ಕೃಷಿ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಅದರ ವಿಡಿಯೋ ಹಾಗೂ ಫೋಟೋ ತುಣುಕುಗಳನ್ನು ರೈತರಿಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಿದರು.

ಮಣ್ಣಿನ ವಿಶೇಷ ತಜ್ಞರಾದ ಎನ್.ಬಿ ಪ್ರಕಾಶ್, ಬೆಂಗಳೂರಿನ ನಿವೃತ್ತ ಕೃಷಿ ವಿಜ್ಞಾನಿ ಎನ್.ಆರ್ ಗಂಗಾಧರಪ್ಪ ಹಾಗೂ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ ರಂಗನಾಥ್, ಆಡಳಿತಾಧಿಕಾರಿ ಡಾ.ಹೆಚ್. ವಿ.ವಾಮದೇವಪ್ಪ, ಅಣ್ಣನ ಬಳಗದ ಅಧ್ಯಕ್ಷರಾದ ಬಿ.ಎಸ್ ಮರಳಸಿದ್ದಯ್ಯ, ದಾವಣಗೆರೆ ಶಿವಸೇನೆಯ ಅಧ್ಯಕ್ಷ ಶಶಿಧರ್ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.

# ಗಾಂಧೀಜಿಯ ಸಂದೇಶ ಅನುಸರಿಸುವುದೇ ಅವರಿಗೆ ನೀಡುವ ಗೌರವ

### ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಆಶಯ



ದಾವಣಗೆರೆ, ಅ. 3- ಗಾಂಧೀಜಿ ಎನ್ನುವ ಹೆಸರೇ ಒಂದು ಬೆಳಕು. ಆ ಬೆಳಕು ಇಂದಿಗೂ ಮನುಕುಲವನ್ನು ಆದರ್ಶಪ್ರಾಯವಾಗಿ ಬೆಳಗುತ್ತಿದೆ. ಅವರ ಜೀವನ ಮತ್ತು ನೀಡಿದ ಸಂದೇಶಗಳನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ ಮತ್ತು ಅಪ್ಪಿಕೊಂಡಿದೆ. ಅವರ ಸಂದೇಶಗಳನ್ನು ಅನುಸರಿಸುವುದೇ ನಾವು ಅವರಿಗೆ ನೀಡುವ ಬಹುದೊಡ್ಡ ಗೌರವವಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿನ್ನೆ ಆಯೋಜಿಸಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 154 ನೇ ಜಯಂತಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ 119 ನೇ ಜಯಂತಿ ಆಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಹಿಂಸೆ, ಸರಳತೆ, ಸ್ವಚ್ಛತೆ, ಆದರ್ಶಮಯವಾದ ಜೀವನ, ಪ್ರಾಮಾಣಿಕತೆ, ಸತ್ಯದ ಪ್ರತಿಪಾದನೆ ಗಾಂಧೀಜಿಯವರ ಜೀವನದ ಉಸಿರಾಗಿದ್ದವು. ಹಾಗೆಯೇ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಸಹ ತಮ್ಮ ಪ್ರಾಮಾಣಿಕ, ಪರಿಶ್ರಮ, ಸ್ವಚ್ಛ ಆಡಳಿತದ ಮೂಲಕ ನಮ್ಮ ದೇಶವನ್ನು ಮುನ್ನಡೆಸಿದ್ದರು. ಅತ್ಯಂತ ಕಡು ಬಡತನದಲ್ಲಿ ಜನಿಸಿದ್ದರೂ ತಮ್ಮ ಛಲ, ಕಠಿಣ ಪರಿಶ್ರಮದ ಮೂಲಕ ದೇಶದ ಅತ್ಯುನ್ನತ ಹುದ್ದೆ ಪ್ರಧಾನ ಮಂತ್ರಿ ಸ್ಥಾನವನ್ನು ಅಲಂಕರಿಸಿದರು.

ಅವರ ಆಡಳಿತಾವಧಿಯ ಸಂದರ್ಭದಲ್ಲಿ ದೇಶ ಹಸಿವು, ಬಡತನ, ಯುದ್ಧ ಮೊದಲಾದ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿತ್ತು. ಅದನ್ನೆಲ್ಲ ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ ಕೀರ್ತಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರಿಗೆ ಸಲ್ಲುತ್ತದೆ ಎಂದು ವಾಮದೇವಪ್ಪ ಬಣ್ಣಿಸಿದರು.

ಯುವ ಕವಿ ಬಿ.ಎಂ.ಪ್ರವೀಣ್ ಬಿಳಸನೂರು ಮಹಾತ್ಮ ಗಾಂಧಿಯವರ ಬಗ್ಗೆ ಹಾಗೂ ವಿನೂತನ ಮಹಿಳಾ ಸಮಾಜದ ಸಹ ಕಾರ್ಯದರ್ಶಿ ಲತಾ ಸತೀಶ್ ಅವರು ಲಾಲ್ ಬಹದ್ದೂರ್ ಶಾಸ್ತ್ರಿಯವರ ಬಗ್ಗೆ ಉಪನ್ಯಾಸ ನೀಡಿದರು.

ಹಿರಿಯ ವೈದ್ಯ ಡಾ. ಜಿ.ಶಿವಲಿಂಗಪ್ಪ, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಹೆಚ್. ಎನ್.ಶಿವಕುಮಾರ್, ವಿದ್ಯಾನಗರ ಲಯನ್ಸ್ ಕ್ಲಬ್ ಅಧ್ಯಕ್ಷ ಸಿ.ಹೆಚ್.ದೇವರಾಜ, ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ವಿನೂತನ ಮಹಿಳಾ ಸಮಾಜದ ಸದಸ್ಯೆಯರು ಸರ್ವ ಧರ್ಮ ಪ್ರಾರ್ಥನೆ ಮಾಡಿದರು.

ಸಮಾರಂಭದಲ್ಲಿ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಹಿರಿಯ ಕಲಾವಿದ ಎ. ಮಹಾಲಿಂಗಪ್ಪ, ಕಾರವಾರದ ಯಕ್ಷಗಾನ ಕಲಾವಿದರಾದ ಸುಮಂಗಲಾ ಹೆಗಡೆ, ಮಾಗನೂರು ಬಸಪ್ಪ ಪದವಿಪೂರ್ವ ಕಾಲೇಜಿನ ನಿರ್ದೇಶಕ ಕುಮಾರ್, ಜಿಲ್ಲಾ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯರಾದ ಎನ್.ಎಸ್. ಸತ್ಯಭಾಮ ಮಂಜುನಾಥ್, ಭೈರವೇಶ್ವರ, ಕೊರಟಗೆರೆ ಶಿವಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಕಾರ್ಯಕ್ರಮ ನಿರೂಪಿಸಿದರು. ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ವಂದಿಸಿದರು.

# ನಗರದ ಕೆ. ರಾಘವೇಂದ್ರ ನಾಯರಿ ಅವರಿಗೆ 'ಜನನಿ ಯಕ್ಷಗಾನ ರತ್ನ' ಪ್ರಶಸ್ತಿ



ದಾವಣಗೆರೆ, ಅ. 3 - ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಂಪಾಪಟ್ಟಣದ ಜನನಿ ಸೇವಾ ಮತ್ತು ಸಾಂಸ್ಕೃತಿಕ ಸಂಘ ಮತ್ತು ಜನನಿ ಸೇವಾ ಟ್ರಸ್ಟ್ ವತಿಯಿಂದ ನೀಡಲಾಗುವ 2023 ರ ಸಾಲಿನ 'ಜನನಿ ಯಕ್ಷಗಾನ ರತ್ನ' ರಾಜ್ಯ ಪ್ರಶಸ್ತಿಯನ್ನು ನಗರದ ಯಕ್ಷಗಾನ ಕಲಾವಿದ ಕೆ.ರಾಘವೇಂದ್ರ ನಾಯರಿ ಅವರಿಗೆ ಪ್ರದಾನ ಮಾಡಲಾಯಿತು.

ಶಾಲಾ ಕಾಲೇಜು ದಿನಗಳಲ್ಲೇ ಯಕ್ಷಗಾನ ಕಲಾವಿದರಾಗಿದ್ದ ಕೆ. ರಾಘವೇಂದ್ರ ನಾಯರಿ ಅವರು ಲಂಡನ್‌ನ ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನ ಸೇರಿದಂತೆ, ದೇಶ-ವಿದೇಶಗಳಲ್ಲಿ ಹಲವಾರು ಯಕ್ಷಗಾನ ಪ್ರದರ್ಶನ ನೀಡಿದ್ದಾರೆ. ಜೊತೆಗೆ ಕಾರ್ಮಿಕ ನಾಯಕನಾಗಿ, ಕನ್ನಡ ಸಾಹಿತ್ಯ ಪರಿಷತ್ ಮುಂತಾದ ನಾನಾ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ನಾಯರಿ ಅವರ ಬಹುಮುಖ ಪ್ರತಿಭೆಯನ್ನು ಪರಿಗಣಿಸಿ 'ಜನನಿ ಯಕ್ಷಗಾನ ರತ್ನ' ಪ್ರಶಸ್ತಿ ನೀಡಲಾಗಿದೆ ಎಂದು ಜನನಿ ಸೇವಾ ಟ್ರಸ್ಟ್ ತಿಳಿಸಿದೆ.

ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಸಂಡೂರಿನ ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತ ಮಠದ ಶ್ರೀ ಪ್ರಭು ಸ್ವಾಮೀಜಿ ವಹಿಸಿದ್ದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಾಯಕ ಕುಲ ಸಚಿವ ಎಂ.ಎಂ. ಶಿವಪ್ರಕಾಶ್ ಸಮಾರಂಭವನ್ನು ಉದ್ಘಾಟಿಸಿ, ಸಾಧಕರಿಗೆ ನೀಡುವ ಪ್ರಶಸ್ತಿಗಳು ಅವರ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಯಾವುದೇ ಲಾಭಿಯಿಲ್ಲದೇ ನೈಜವಾಗಿ ಸಾಧನೆಯನ್ನು ಗುರುತಿಸಿ ನೀಡಿದಾಗ ಪ್ರಶಸ್ತಿಯ ಗೌರವ ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು. ಸಮಾರಂಭದ ಅಧ್ಯಕ್ಷತೆಯನ್ನು ಟ್ರಸ್ಟ್ ಗೌರವಾಧ್ಯಕ್ಷ ಆರ್.ಖಾಜಾ ಹುಸೇನ್ ಸಾಬ್ ವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಎ. ಕೇಶವಮೂರ್ತಿ, ತಾಲ್ಲೂಕು ಕರವೇ ಅಧ್ಯಕ್ಷ ಬುಡ್ಡಿ ಬಸವರಾಜ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ಪಿ.ಎಂ.ಮಂಜುನಾಥ್, ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಬಿ.ಆನಂದಮೂರ್ತಿ, ಪದಾಧಿಕಾರಿಗಳಾದ ವಿಶ್ವನಾಥ್ ಬಿಲ್ಲವ, ಕೆ.ಶಶಿಶೇಖರ್, ರಾಜ್ಯ ಬೀಜ ನಿಗಮದ ಅಧಿಕಾರಿ ನಾಗರಕಟ್ಟೆ ಎಸ್.ರಾಜೇಂದ್ರ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

# ಮಕ್ಕಳು-ತಾಯಂದಿರ ಮರಣ ಪ್ರಮಾಣ ತಗ್ಗಿಸಲು ಅಗತ್ಯ ಕ್ರಮಕ್ಕೆ ಡಿಸಿ ನಿರ್ದೇಶನ



ದಾವಣಗೆರೆ, ಅ. 3 - ಮಕ್ಕಳು ಮತ್ತು ತಾಯಂದಿರ ಮರಣ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ಸಂಬಂಧಿತ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳಬೇಕು. ಮಿಷನ್ ಇಂದ್ರಧನುಷ್ ಅಭಿಯಾನದ ಕೊನೆಯ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ 3 ನೇ ಸುತ್ತಿನ ಮಿಷನ್ ಇಂದ್ರಧನುಷ್ 5.0 ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತುಂಬು ಗರ್ಭಿಣಿಯರಿಗೆ ತುರ್ತು ಸಂದರ್ಭದಲ್ಲಿ ವೆಂಟಿಲೇಟರ್ ವ್ಯವಸ್ಥೆ, ಬಿ.ಪಿ, ಮಧುಮೇಹ ಪರೀಕ್ಷೆ, ಅಗತ್ಯ ಔಷಧಿ ಹಾಗೂ ಚಿಕಿತ್ಸೆ ನೀಡಬೇಕು ಎಂದು ನಿರ್ದೇಶಿಸಿದರು.

ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಇಂದ್ರಧನುಷ್ ಅಭಿಯಾನವು ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳಬೇಕು. ನಗರದ ವಿವಿಧ ಭಾಗಗಳಲ್ಲಿ ಪೋಷಕರೇ ಮಕ್ಕಳಿಗೆ ಲಸಿಕೆ ಹಾಕಿಸಲು ಹಿಂದೆ ಸರಿಯುತ್ತಿದ್ದು, ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 44 ಮಕ್ಕಳು ಲಸಿಕೆಯಿಂದ ವಂಚಿತರಾಗಿರುವುದರಿಂದ ಲಸಿಕೆ ಕುರಿತು ಪೋಷಕರಿಗೆ ಸಂಪೂರ್ಣ ಮಾಹಿತಿ ನೀಡಿ ಮಕ್ಕಳಿಗೆ ಲಸಿಕೆ ನೀಡಬೇಕು ಎಂದರು.

3ನೇ ಸುತ್ತಿನ ಮಿಷನ್ ಇಂದ್ರಧನುಷ್ ಅಭಿಯಾನವು ಇದೇ ದಿನಾಂಕ 9 ರಿಂದ 14ರ ವರೆಗೆ ನಡೆಯಲಿದ್ದು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ತರಬೇತಿ ನೀಡಬೇಕು. ನಿಗದಿತ ಸಮಯದಲ್ಲಿ ರೋಗಿ ಗಳ ತುರ್ತು ಚಿಕಿತ್ಸೆಗಾಗಿ 108 ಆಂಬ್ಯುಲೆನ್ಸ್ ಸೇವೆ ಯನ್ನು ಬಳಸಿಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸ ಬೇಕು. ನಗರದಲ್ಲಿ ಕಾನೂನು ಬಾಹಿರವಾಗಿ ಧೂಮಪಾನ ಹಾಗೂ ಮದ್ಯಪಾನ ಸೇವನೆ ಮಾಡುತ್ತಿದ್ದು ಅಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಜಿಲ್ಲಾಸ್ಪತ್ರೆ ಡಯಾಲಿಸಿಸ್ ಕೇಂದ್ರದಲ್ಲಿ ರೋಗಿಗಳಿಗೆ ಫ್ಯಾನ್, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಅವರಿಗೆ ಸೂಕ್ತ ವಾತಾವರಣ ಕಲ್ಪಿಸಬೇಕು.

ನಗರದಲ್ಲಿ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳೇ ಗಾಂಜಾ ಅಥವಾ ಇತರೆ ಮಾದಕ ವಸ್ತುಗಳಿಗೆ ಹೆಚ್ಚು ಆಕರ್ಷಿತರಾಗಿ ಬಲಿಯಾಗುತ್ತಿದ್ದಾರೆ. ಕಾಲೇಜುಗಳಲ್ಲಿ ಕೌನ್ಸಿಲಿಂಗ್ ನಡೆಸಿ ಮಾದಕ ವಸ್ತುಗಳಿಂದ ವಿದ್ಯಾರ್ಥಿಗಳನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು.

ಡಿಹೆಚ್‌ಓ ಡಾ. ಷಣ್ಮುಖಪ್ಪ. ಎಸ್, ಆರ್.ಸಿ.ಹೆಚ್ ಅಧಿಕಾರಿ ಡಾ. ರೇಣುಕಾರಾಧ್ಯ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಾಗೇಂದ್ರಪ್ಪ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## 12ಕ್ಕೆ ವಿಭಾಗೀಯ ಅದಾಲತ್

ದಾವಣಗೆರೆ, ಅ. 3 - ನಗರದ ಗಡಿಯಾರ ಕಂಬದ ಹತ್ತಿರದ ಪ್ರಧಾನ ಅಂಚೆ ಕಚೇರಿಯ 1ನೇ ಮಹಡಿಯ ಜಿಲ್ಲಾ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಇದೇ ದಿನಾಂಕ 12ರಂದು ಸಂಜೆ ಅಂಚೆ ವಿಭಾಗೀಯ ಡಾಕ್ ಅದಾಲತ್ತನ್ನು ಆಯೋಜಿಸಲಾಗಿದೆ ಎಂದು ಅಂಚೆ ಅಧೀಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

# ವಿನೂತನ ಸಮಾಜದಲ್ಲಿ ಗಾಂಧೀಜಿ - ಶಾಸ್ತ್ರೀಜಿ, ಹಿರಿಯರ ದಿನಾಚರಣೆ



ದಾವಣಗೆರೆ, ಅ.3- ಇಲ್ಲಿನ ವಿದ್ಯಾನಗರದ ವಿನೂತನ ಮಹಿಳಾ ಸಮಾಜದಲ್ಲಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಗಾಂಧೀಜಿ - ಶಾಸ್ತ್ರೀಜಿ ಹಾಗೂ ಹಿರಿಯರ ದಿನಾಚರಣೆ ಆಚರಿಸಲಾಯಿತು.

100ಕ್ಕೂ ಹೆಚ್ಚು ಜನ ಹಿರಿಯರು ಕಾರ್ಯಕ್ರಮಕ್ಕೆ ಆಗಮಿಸಿ, ವಯಸ್ಸು ಮರೆತು ಉತ್ಸುಕತೆಯಿಂದ ಆಟಗಳಲ್ಲಿ ಭಾಗವಹಿಸಿ ಬಹುಮಾನ ಪಡೆದು ತಮ್ಮ ಅನುಭವ ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಹಿರಿಯ ವೈದ್ಯರಾದ ಡಾ. ಶಾಂತಾಭಟ್ ಆಗಮಿಸಿ, ವಯೋವೃದ್ಧರು ತಮ್ಮ ಮಿತ ಆಹಾರ ಹಾಗೂ ಉತ್ತಮ ರೀತಿಯ ವ್ಯಾಯಾಮದಿಂದ ತಮ್ಮ ಜೀವನ ಶೈಲಿಯನ್ನು ಯಾವ ರೀತಿ ರೂಢಿಸಿಕೊಳ್ಳಬೇಕು ಹಾಗೂ ಕ್ರಿಯಾತ್ಮಕವಾಗಿ ಹೇಗಿರಬೇಕು ಎಂದು ಸಲಹೆ ನೀಡಿದರು.

ಚಂದ್ರಾ ಶೆಟ್ರು, ರೇಣುಕಾ ಪ್ರಾರ್ಥಿಸಿದರು.ಪುಷ್ಪಾ ಬಸವರಾಜ್ ಸ್ವಾಗತಿಸಿದರು. ಗೀತಾ ರೆಡ್ಡಿ ವಂದಿಸಿದರು. ಹೇಮಾ ಜಿ. ಶೇಟ್ ಅತಿಥಿಗಳನ್ನು ಪರಿಚಯಿಸಿದರು. ಇಂದಿರಾ ರೆಡ್ಡಿ ಹಾಗೂ ಲತಾ ಸತೀಶ್ ಬಹುಮಾನಗಳ ವಿವರಣೆ ನೀಡಿದರು. ಭುವನ ಚಂದ್ರಶೇಖರ್, ಸುಧಾ ಪಾಟೀಲ್ ಗೌರವ ಸಮರ್ಪಣೆ ಸಲ್ಲಿಸಿದರು. ಶ್ರೀಮತಿ ರತ್ನಾ ರೆಡ್ಡಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಯಶೋಧ ರಾಜಗೋಪಾಲ್ ರೆಡ್ಡಿ ಪ್ರಸಾದದ ವ್ಯವಸ್ಥೆ ಮಾಡಿದರು.

## ಹಿಂದೂಗಳನ್ನು ಒಡೆಯಲು ಕಾಂಗ್ರೆಸ್ ಹುನ್ನಾರ : ಮೋದಿ

ಜಗದಾಳ್ಪುರ, ಅ. 3 – ದೇಶಾದ್ಯಂತ ಜಾತಿ ಗಣತಿ ನಡೆಸಬೇಕು ಎಂಬ ಬೇಡಿಕೆ ಮುಂದಿಡುತ್ತಿರುವ ಕಾಂಗ್ರೆಸ್ ಪಕ್ಷ, ಹಿಂದೂಗಳನ್ನು ಒಡೆಯಲು ಹುನ್ನಾರ ನಡೆಸಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಸಮಾರಂಭವೊಂದರಲ್ಲಿ ಮಾತನಾಡಿದ ಪ್ರಧಾನಿ, ಬಡವರೇ ದೇಶದಲ್ಲಿ ಹೆಚ್ಚಾಗಿದ್ದಾರೆ. ಅವರಿಗೆ ಸಂಪನ್ಮೂಲದ ಮೇಲೆ ಮೊದಲ ಹಕ್ಕಿರಬೇಕು. ಅವರ ಅಭಿವೃದ್ಧಿಯೇ ನನ್ನ ಗುರಿ ಎಂದರು. ಹಿಂದೂಗಳನ್ನು ಒಡೆಯುವ ಮೂಲಕ ದೇಶದ ನಾಶಕ್ಕೆ ಕಾಂಗ್ರೆಸ್ ಬಯಸಿದೆ. ಅವರು ಬಡವರನ್ನೂ ಒಡೆಯಲು ಬಯಸಿದ್ದಾರೆ ಎಂದು ಪ್ರಧಾನಿ ಟೀಕಿಸಿದರು.

## ಬಿಹಾರ : ನ್ಯಾಯಿಕ ಸೇವೆಗಳಲ್ಲಿ ಆರ್ಥಿಕ ಮೀಸಲಾತಿ

ಪಾಟ್ನಾ,ಅ.3-ನ್ಯಾಯಿಕ ಸೇವೆ ಹಾಗೂ ರಾಜ್ಯ ಕಾನೂನು ಕಾಲೇಜುಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರಿಗೆ ಶೇ.10ರ ಮೀಸಲಾತಿ ನೀಡುವುದಾಗಿ ಸರ್ಕಾರ ಪ್ರಕಟಿಸಿದೆ. ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ:12-10-1945 ಲಿಂಗೈಕ್ಯ:30-09-2023

॥ ಶ್ರೀ ಗುರು ಪಂಚಾಚಾರ್ಯ ಪ್ರಸನ್ನ ॥

ಶ್ರೀ ನಾಗರಾಜಯ್ಯ ಕೆ. ಹಿರೇಮಠ್ (ರಾಜು)

ಹಗೇದಿಬ್ಬ ಸರ್ಕಲ್, ಹಿರೇಮಠ್ ಕಾಂಪೌಂಡ್, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 30-09-2023ನೇ ಶನಿವಾರ ಬೆಳಿಗ್ಗೆ 10-30 ಕ್ಕೆ ನನ್ನ ಸಹೋದರ

**ಶ್ರೀ ಹೆಚ್.ಕೆ. ಮಹಾಲಿಂಗಸ್ವಾಮಿ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : 04-10-2023ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಹಗೇದಿಬ್ಬ ಸರ್ಕಲ್, ಹಿರೇಮಠ ಕಾಂಪೌಂಡಿನಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಹೆಚ್.ಕೆ. ನಾಗರಾಜಯ್ಯ (ರಾಜು) ರೇಣುಕಮ್ಮ, ಮಂಜುಳಮ್ಮ, ಚೇತನ್ ಕುಮಾರಸ್ವಾಮಿ ಹಾಗೂ ಹಿರೇಮಠದ ಬಂಧುಗಳು ಹಾಗೂ ಮಿತ್ರರು. ಮೊ. : 86182 68996

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.






# ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದಲ್ಲಿ ಗಾಂಧೀಜಿ-ಶಾಸ್ತ್ರೀಜಿ ಜಯಂತಿ



ದಾವಣಗೆರೆ, ಅ.3- ನಗರದ ಪಿ.ಜೆ. ಬಡಾವಣೆಯ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಆಶ್ರಯದಲ್ಲಿ ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿ ಆಚರಿಸಲಾಯಿತು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಗಾಂಧೀಜಿ ಸ್ಮಾರಕದ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡುತ್ತಾ, ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡುತ್ತಾ, ಒಗ್ಗಟ್ಟಿನಿಂದ ಸಂಸ್ಥೆಯನ್ನು ನಡೆಸಿಕೊಂಡು ಹೋಗಬೇಕು ಎಂದು ಅವರು ತಿಳಿಸಿದರು.

ಈ ಸಂಸ್ಥೆಗೆ ಗಾಂಧೀಜಿಯವರು 1934ರಲ್ಲಿ ಗುದ್ದಲಿ ಪೂಜೆ ನೆರವೇರಿಸಿರುತ್ತಾರೆ. ಸಂಸ್ಥೆಯವರು ಗಲಾಟೆ-ಗದ್ದಲ, ಭಿನ್ನಾಭಿಪ್ರಾಯ ಮರೆತು ಸಂಸ್ಥೆಯನ್ನು ಬೆಳೆಸಿಕೊಂಡು ಹೋಗಬೇಕೆಂದು ಕರೆ ನೀಡಿದರು.

ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಮಾತನಾಡಿ, ಗಾಂಧೀಜಿ ಹಾಗೂ ಶಾಸ್ತ್ರೀಜಿಯವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಗಾಂಧೀಜಿಯವರು ಕಾಲ್ನಡಿಗೆಯಲ್ಲಿ ಗಾಂಧಿನಗರದಿಂದ ಇಲ್ಲಿಗೆ ಬಂದು ಹಾಸ್ಟೆಲ್ ಜಾಗ ತೋರಿಸಿ, ಅವರ ಹಸ್ತದಿಂದ ಗುದ್ದಲಿ ಪೂಜೆ ಮಾಡಿರುವುದು ನಮ್ಮ-ನಿಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ ಎಂದರು.

ಸಂಸ್ಥೆಯ ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ಸ್ವಾಗತಿಸಿದರು. ಅಧ್ಯಕ್ಷ ಎಲ್. ಎಂ. ಹನುಮಂತಪ್ಪ, ಉಪಾಧ್ಯಕ್ಷ ಬಿ.ಎಂ. ರಾಮಸ್ವಾಮಿ, ಜಂಟಿ ಕಾರ್ಯದರ್ಶಿ ಕೆ. ಚಂದ್ರಣ್ಣ, ನಿರ್ದೇಶಕರುಗಳಾದ ಬಿ.ಎಂ. ಈಶ್ವರ್, ಮಂಜಪ್ಪ ಹಲಗೇರಿ, ಮಲ್ಲೇಶ್ ಕುಕ್ಕುವಾಡ, ಸಾಗರ್, ಸದಸ್ಯರಾದ ಶಿವಮೂರ್ತಿ ಬಿ.ಆರ್., ಬಿ.ಎಲ್. ಪರಶುರಾಮ್, ಜಿ. ರಾಕೇಶ್ ಮತ್ತು ಇತರರು ಉಪಸ್ಥಿತರಿದ್ದರು.